ಕನ್ನಡಪ್ರಭ

HDK ಹುಟ್ಟುಹಬ್ಬ ವಿಶೇಷ

16 ಡಿಸೆಂಬರ್ 2020


ಬಡವರ ಬಂಧು, ರೈತರ ಅಣ್ಣ, ನವನಗರದ ಕನಸುಗಾರ ಎಚ್ ಡಿ ಕುಮಾರಸ್ವಾಮಿ ಕಂಡ

# ಕುಮಾರ ಕರ್ನಾಟಕ



## ಹಲವು ಮಹಾನ್ ಸಾಧನೆಗಳ ಹರಿಕಾರ

ಗ್ರಾಮವಾಸ್ತವ್ಯ, ಜನತಾ ದರ್ಶನ, ಸಾರಾಯಿ- ಲಾಟರಿ ನಿಷೇಧ, ಕೃಷಿ ಸಾಲ ಮನ್ನಾ, ಸುವರ್ಣ ಗ್ರಾಮ ಯೋಜನೆ, ಕಾಂಪೀಟ್ ವಿತ್ ಚೀನಾ ಕಾರ್ಯಕ್ರಮ, ನೆರೆ ಸಂತ್ರಸ್ತರಿಗೆ ದಾಖಲೆ ಪರಿಹಾರ, ಬೆಳಗಾವಿ ಅಧಿವೇಶನ ಆಯೋಜನೆ ಹಾಗೂ ಸುವರ್ಣ ಸೌಧ ನಿರ್ಮಾಣ, ಇಸ್ರೇಲ್ ಮಾದರಿ ಕೃಷಿ ಜಾರಿ ಪ್ರಯತ್ನ, ರೈತರನ್ನು ಋಣಮುಕ್ತಗೊಳಿಸುವ ಕಾಯ್ದೆ, ಬೀದಿ ಬದಿ ವ್ಯಾಪಾರಿಗಳಿಗೆ ನೆರವಾಗುವ ಬಡವರ ಬಂಧು ಯೋಜನೆ, ಸರ್ಕಾರಿ ಪಬ್ಲಿಕ್ ಶಾಲೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಯ ಸಂಪೂರ್ಣ ಶ್ರೇಯಸ್ಸು ಮಾಜಿ ಮುಖ್ಯಮಂತ್ರಿ **ಎಚ್.ಡಿ. ಕುಮಾರಸ್ವಾಮಿ** ಅವರಿಗೇ ಸಲ್ಲಬೇಕಿದೆ.

ರೈತ ಬಂಧು, ಪ್ರಗತಿಯ ಹರಿಕಾರ, ಮಾಜಿ ಮುಖ್ಯಮಂತ್ರಿ

**ಶ್ರೀ ಎಚ್.ಡಿ. ಕುಮಾರಸ್ವಾಮಿ**ಯವರ

61ನೇ ಹುಟ್ಟುಹಬ್ಬಕ್ಕೆ ತುಂಬು ಹೃದಯದಿಂದ

**ಶುಭಕೋರುವವರು**

**ಟಿ.ಎ. ಶರವಣ**

ವಿಧಾನಪರಿಷತ್ ಮಾಜಿ ಶಾಸಕರು ಹಾಗೂ

ರಾಜ್ಯ ಜೆಡಿಎಸ್ ವಕ್ತಾರರು



ಕುಮಾರ ಕರ್ನಾಟಕ
HDK ಹುಟ್ಟುಹಬ್ಬ ವಿಶೇಷ
ಕನ್ನಡಪ್ರಭ
ಬುಧವಾರ
16.12.2020











# ಜನ ಮೆಚ್ಚಿದ ನಾಯಕ

## ಜನಪ್ರಿಯ ಯೋಜನೆಗಳ ಸರದಾರ | ನಾಗರಿಕರ ಬಳಿಗೆ ಸರ್ಕಾರ ಒಯ್ದ ದಳಪತಿ



**ಗ್ರಾಮವಾಸ್ತವ್ಯ, ಸಾರಾಯಿ ನಿಷೇಧ, ಸಾಲ ಮನ್ನಾ ಮೂಲಕ ಸಾರ್ವಜನಿಕರ ಮನಗೆದ್ದ ಮುಖ್ಯಮಂತ್ರಿ ಕುಮಾರಸ್ವಾಮಿ**

ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಹರದನಹಳ್ಳಿಯ ಎಚ್.ಡಿ. ದೇವೇಗೌಡ ಮತ್ತು ಚೆನ್ನಮ್ಮ ದಂಪತಿಗೆ 1956ರ ಡಿಸೆಂಬರ್ 16ರಂದು ಮೂರನೇ ಮಗನಾಗಿ ಜನಿಸಿದವರು ಎಚ್.ಡಿ. ಕುಮಾರಸ್ವಾಮಿ. ಪಿಡಬ್ಲ್ಯೂಡಿ ಗುತ್ತಿಗೆದಾರರಾಗಿದ್ದ ದೇವೇಗೌಡರು ಅಲ್ಲಿವರೆಗೂ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿರಲಿಲ್ಲ. ಕುಮಾರಸ್ವಾಮಿ ಹುಟ್ಟಿದ ನಾಲ್ಕನೇ ವರ್ಷಕ್ಕೆ ದೇವೇಗೌಡ ರಾಜಕಾರಣ ಪ್ರವೇಶಿಸಿದರು. ಮೊದಲ ಯತ್ನದಲ್ಲಿಯೇ ತಾಲೂಕು ಬೋರ್ಡ್ ಸದಸ್ಯರಾಗಿ ಆಯ್ಕೆಯಾದಗೌಡರು1962ರಲ್ಲಿಪ್ರಪ್ರಥಮಬಾರಿಗೆಶಾಸಕರಾಗಿಯೂ ಚುನಾಯಿತರಾದರು.

ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಬಿಎಸ್ಸಿ ಪದವಿ ಪಡೆದ ಕುಮಾರಸ್ವಾಮಿ ಚಿತ್ರರಂಗದೆಡೆಗೆ ಆಸಕ್ತಿ ಹೊಂದಿದ್ದರು. 1987– 88ನೇ ಸಾಲಿನಲ್ಲಿ ದೇವೇಗೌಡರು ರಾಜ್ಯ ರಾಜಕಾರಣದಲ್ಲಿ ಮುಂಚೂಣಿಯಲ್ಲಿದ್ದರು. ಚಿತ್ರರಂಗದೆಡೆಗೆ ಒಲವು ಹೊಂದಿದ್ದ ಕುಮಾರಸ್ವಾಮಿ, ಮನೆಯವರ ವಿರೋಧದ ನಡುವೆಯೂ ಗಾಂಧಿನಗರಕ್ಕೆ ಕಾಲಿಟ್ಟರು. ಸಿನಿಮಾ ಪ್ರದರ್ಶಕರಾಗಿ ಗುರುತಿಸಿಕೊಂಡ ಕುಮಾರಸ್ವಾಮಿ ಹೊಳೆ ನರಸೀಪುರದಲ್ಲಿ ತಾಯಿ ಚೆನ್ನಮ್ಮರ ಹೆಸರಿನಲ್ಲಿ ಚೆನ್ನಾಂಬಿಕಾ ಚಿತ್ರಮಂದಿರ ನಿರ್ಮಿಸಿದರು.

ಚಿತ್ರರಂಗದಲ್ಲಿ 'ಪಂಚಮವೇದ' ಚಿತ್ರದ ಮೂಲಕ ವಿತರಕರಾಗಿ ಗುರುತಿಸಿಕೊಂಡರು. ಆ ಚಿತ್ರ ಸೂಪರ್ ಹಿಟ್ ಕೂಡ ಆಯಿತು. 'ಗಲಾಟೆ ಅಳಿಯಂದಿರು' ರೀಮೆಕ್ ಚಿತ್ರದ ಮೂಲಕನಿರ್ಮಾಣದಲ್ಲಿಯೂತೊಡಗಿದರು. ನಂತರ 'ಚಂದ್ರ ಚಕೋರಿ', 'ಸೂರ್ಯವಂಶ'ದಂತಹ ಸೂಪರ್ ಹಿಟ್ ಚಿತ್ರಗಳನ್ನು ಕನ್ನಡ ಚಿತ್ರರಂಗಕ್ಕೆ ನೀಡಿದರು. ಅವರಿಗೆ 1990ರವರೆಗೆ ರಾಜಕೀಯದ ಸಂಪರ್ಕವೇ ಇರಲಿಲ್ಲ.

### ಶಾಸಕರಾದ ಎರಡೇ ವರ್ಷದಲ್ಲಿ ಸಿಎಂ

1996ರ ಲೋಕಸಭೆ ಚುನಾವಣೆಯಲ್ಲಿ ಕನಕಪುರ ಕ್ಷೇತ್ರದಲ್ಲಿ ಜನತಾದಳದ ಅಭ್ಯರ್ಥಿಯಾಗಿ ನಾಯಕರ ಬಲವಂತಕ್ಕೆ ಕಣಕ್ಕಿಳಿದು ಗೆಲವು ಸಾಧಿಸುವ ಮೂಲಕ ರಾಜಕೀಯ ಜೀವನ ಆರಂಭಿಸಿದರು. 1999ರ ವಿಧಾನಸಭೆ ಚುನಾವಣೆಯಲ್ಲಿ ಸಾತನೂರು ಕ್ಷೇತ್ರದಲ್ಲಿ ಡಿ. ಕೆ.ಶಿವಕುಮಾರ್ ಎದುರು ಪರಾಭವಗೊಂಡ ನಂತರ ರಾಮನಗರ ಕ್ಷೇತ್ರವನ್ನು ಕರ್ಮಭೂಮಿ ಮಾಡಿಕೊಂಡರು.

ರಾಮನಗರ ಕ್ಷೇತ್ರದಿಂದ ಗೆದ್ದವರು ಮುಖ್ಯಮಂತ್ರಿ ಹುದ್ದೆ ಅಲಂಕರಿಸುತ್ತಾರೆ ಎಂಬ ಪ್ರತೀತಿ ಹಿಂದಿನಿಂದಲೂ ಚಾಲ್ತಿಯಲ್ಲಿದೆ. ರಾಮನಗರ ಕ್ಷೇತ್ರ ಕೆಂಗಲ್ ಹನುಮಂತಯ್ಯ, ಎಚ್.ಡಿ.ದೇವೇಗೌಡ ಅವರನ್ನು ರಾಜ್ಯಕ್ಕೆ ಮುಖ್ಯಮಂತ್ರಿಯನ್ನಾಗಿ ನೀಡಿತ್ತು. 2004ರ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಕುಮಾರಸ್ವಾಮಿ ಆಯ್ಕೆಯಾಗಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು.

ಕಾಂಗ್ರೆಸ್– ಜೆಡಿಎಸ್ ಸಮ್ಮಿಶ್ರ ಸರ್ಕಾರ ಪತನಗೊಂಡ ನಂತರ ತಂದೆಯ ವಿಶ್ವಾಸಕ್ಕೆ ವಿರುದ್ಧವಾಗಿ ಬಿಜೆಪಿಯೊಂದಿಗೆ ಕೈಜೋಡಿಸಿ ಸರ್ಕಾರ ರಚಿಸಿ, 2006ರ ಫೆಬ್ರವರಿ 3ರಂದು ಕರ್ನಾಟಕದ 18ನೇ ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿ ಅಧಿಕಾರ ಸ್ವೀಕರಿಸಿದರು. ಅತ್ಯಂತ ಕಿರಿಯ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೂ ಪಾತ್ರರಾದರು.

### ಅತ್ಯುತ್ತಮ ಮುಖ್ಯಮಂತ್ರಿ

ಮುಖ್ಯಮಂತ್ರಿಯೇ ಜನರ ಬಳಿಗೆ ಹೋಗಿ ಸಮಸ್ಯೆ ಆಲಿಸುವ ಜನತಾ ದರ್ಶನ ಕಾರ್ಯಕ್ರಮ ಆರಂಭಿಸಿದರು. ನಂತರ ಜನತಾ ದರ್ಶನವನ್ನು ಮೊದಲ ಬಾರಿ ಜಿಲ್ಲೆಗಳಿಗೆ ವಿಸ್ತರಿಸಿ ಜಿಲ್ಲಾ ದರ್ಶನ ಕಾರ್ಯಕ್ರಮವನ್ನಾಗಿ ಮಾಡಿದರು. ಹಳ್ಳಿಗಾಡಿನ ಸಮಸ್ಯೆಗಳನ್ನು ಹತ್ತಿರದಿಂದ ಅರಿಯಲು ಗ್ರಾಮ ವಾಸ್ತವ್ಯ ಎಂಬ ಹೊಸ ಪರಿಕಲ್ಪನೆಗೆ ಚಾಲನೆ ನೀಡಿದರು. ರಾಜ್ಯದಲ್ಲಿ ಸಾರಾಯಿ ನಿಷೇಧ ಮಾಡಿದರು. ಭ್ರೂಣ ಹತ್ಯೆ ತಡೆಗೆ ಭಾಗ್ಯಲಕ್ಷ್ಮಿ ಯೋಜನೆ ಜಾರಿಗೆ ತಂದರು. ತನ್ಮೂಲಕ ಜನಪ್ರಿಯ ಹಾಗೂ ಅತ್ಯುತ್ತಮ ಮುಖ್ಯಮಂತ್ರಿ ಎಂಬ ಅಭಿದಾನಕ್ಕೆ ಪಾತ್ರರಾದರು. ಅತಿ ಹೆಚ್ಚು ಅಭಿಮಾನಿಗಳನ್ನೂ ಗಳಿಸಿದರು.

ಕೆಂಗಲ್ ಹನುಮಂತಯ್ಯ ಮತ್ತು ಕುಮಾರಸ್ವಾಮಿ ಇಬ್ಬರೂ ರಾಮನಗರಕ್ಷೇತ್ರ ಪ್ರತಿನಿಧಿಸಿದವರು. ಕೆಂಗಲ್ ಹನುಮಂತಯ್ಯನವರು ಬೆಂಗಳೂರು ವಿಧಾನಸೌಧ ನಿರ್ಮಿಸಿದಂತೆ, ಕುಮಾರಸ್ವಾಮಿ ಅವರು ಬೆಳಗಾವಿಯಲ್ಲಿ ಸುವರ್ಣಸೌಧ ನಿರ್ಮಿಸಲು ಅಡಿಗಲ್ಲು ಹಾಕಿದರು. ಇವರಿಬ್ಬರಿಂದಾಗಿ ರಾಮನಗರ ಕ್ಷೇತ್ರದ ಕೀರ್ತಿ ಮತ್ತಷ್ಟು ಹೆಚ್ಚಿತು.

## ಕುಮಾರಸ್ವಾಮಿ ನಡೆದು ಬಂದ ದಾರಿ

**1959** ಡಿಸೆಂಬರ್ 16ರಂದು ಹಾಸನ ಜಿಲ್ಲೆ ಹರದನಹಳ್ಳಿಯಲ್ಲಿ ಜನನ

**1980** ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಬಿಎಸ್ಸಿ ಪದವಿ

**1982** ಬೆಂಗಳೂರು ಮಹಾನಗರ ಪಾಲಿಕೆಯ ಗುತ್ತಿಗೆದಾರರಾಗಿ ವೃತ್ತಿ ಜೀವನ ಆರಂಭ

**1986** ಮಾರ್ಚ್ 13ರಂದು ಅನಿತಾ ಅವರೊಂದಿಗೆ ದಾಂಪತ್ಯ ಜೀವನಕ್ಕೆ

**1987-88** ಚಲನಚಿತ್ರ ವಿತರಕ, ಪ್ರದರ್ಶಕರಾಗಿ ಕನ್ನಡ ಸಿನಿಮಾ ರಂಗಕ್ಕೆ ಪ್ರವೇಶ

**1996** ಕನಕಪುರ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಸ್ಪರ್ಧಿಸಿ ಗೆಲುವು

**2004** ವಿಧಾನಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಿಂದ ಆಯ್ಕೆ

**2005** ಜಾತ್ಯತೀತ ಜನತಾ ದಳ ಕಾರ್ಯಾಧ್ಯಕ್ಷರಾಗಿ ನೇಮಕ

**2006** ಫೆ.6ರಂದು ಜೆಡಿಎಸ್– ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ

**2008** ವಿಧಾನಸಭೆ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಿಂದ ಪುನರಾಯ್ಕೆ

**2009** ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಆಯ್ಕೆ

**2013** ಸಂಸತ್ ಸ್ಥಾನಕ್ಕೆ ರಾಜೀನಾಮೆ. ರಾಮನಗರ ವಿಧಾನಸಭೆ ಕ್ಷೇತ್ರದಿಂದ 3ನೇ ಬಾರಿ ಆಯ್ಕೆ

**2013** ಜಾತ್ಯತೀತ ಜನತಾದಳ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ

**2014** ಜೆಡಿಎಸ್ ರಾಜ್ಯಾಧ್ಯಕ್ಷರಾಗಿ ನೇಮಕ

**2018** ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲಿ ರಾಮನಗರ ಮತ್ತು ಚನ್ನಪಟ್ಟಣ ಕ್ಷೇತ್ರದಿಂದ ಆಯ್ಕೆ

**2018** ಮೇ 19ರಂದು ವಿಧಾನಸೌಧದಲ್ಲಿ ಚನ್ನಪಟ್ಟಣ ಕ್ಷೇತ್ರದ ಶಾಸಕರಾಗಿ ಪ್ರಮಾಣ ವಚನ ಸ್ವೀಕಾರ

**2018** ಮೇ 23ರಂದು ಜೆಡಿಎಸ್– ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ

**2019** ಜುಲೈ 23ರಂದು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ



### 18 ತಾಸು ಜನತಾ ದರ್ಶನ ದಾಖಲೆ


ಮುಖ್ಯಮಂತ್ರಿ ಆದವರು ಜನರ ಅಹವಾಲು ಆಲಿಸಲು 'ಜನತಾ ದರ್ಶನ' ಕಾರ್ಯಕ್ರಮಗಳನ್ನು ನಡೆಸಿಕೊಂಡೇ ಬಂದಿದ್ದಾರೆ. ಆದರೆ ಕುಮಾರಸ್ವಾಮಿ ಅವರು ನಡೆಸಿದ 'ಜನತಾ ದರ್ಶನ' ಕೇವಲ ಅರ್ಜಿ ಸ್ವೀಕರಿಸುವ ಕಾರ್ಯಕ್ರಮ ಆಗಿರಲಿಲ್ಲ. ಅಂಗವಿಕಲರ ಸಮಸ್ಯೆ, ಅನಾರೋಗ್ಯಕ್ಕೆ ಚಿಕಿತ್ಸೆ, ಉದ್ಯೋಗ, ಸಾಲ ಸೌಲಭ್ಯ, ಮನೆ, ನಿವೇಶನದಂತಹ ಸಮಸ್ಯೆಗಳಿಂದ ಹಿಡಿದು ನೂರೆಂಟು ಬಗೆಯ ಕಷ್ಟಗಳನ್ನು ಹೊತ್ತು ತರುತ್ತಿದ್ದ ಸಾವಿರಾರು ಜನರ ಕಷ್ಟವನ್ನು ಕುಮಾರಸ್ವಾಮಿ ಆಲಿಸುತ್ತಿದ್ದರು. ಒಂದು ಸಂದರ್ಭದಲ್ಲಿ ಕುಮಾರಸ್ವಾಮಿ ಅವರು ಬೆಳಗ್ಗೆ ಶುರು ಮಾಡಿದ 'ಜನತಾ ದರ್ಶನ' ಕಾರ್ಯಕ್ರಮ ಮುಗಿದಾಗ ತಡ ರಾತ್ರಿಯಾಗಿತ್ತು. ಸುಮಾರು 18 ಗಂಟೆಗಳ ಕಾಲ ನಿರಂತರವಾಗಿ ಜನರ ಅಹವಾಲು ಆಲಿಸಿದ್ದು ದಾಖಲೆಯೇ ಸರಿ. 20 ತಿಂಗಳ ಅವಧಿಯಲ್ಲಿ ಸಾವಿರಾರು ಜನರಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಸುಮಾರು 25 ಕೋಟಿ ರು. ಪರಿಹಾರ ನೀಡಿದರು. 20 ಲಕ್ಷಕ್ಕಿಂತ ಹೆಚ್ಚು ಅಹವಾಲುಗಳು ಸಲ್ಲಿಕೆಯಾಗಿದ್ದು, ಈ ಪೈಕಿ ಶೇ.70 ರಷ್ಟು ಅರ್ಜಿಗಳನ್ನು ಸ್ಥಳದಲ್ಲೇ ಇತ್ಯರ್ಥ ಮಾಡಿದರು. ಜನತಾ ದರ್ಶನ ನಡೆಯುವ ಸ್ಥಳದಿಂದಲೇ ಸಂಬಂಧಪಟ್ಟ ಅಧಿಕಾರಿಯ ಜೊತೆ ಮೊಬೈಲ್‌ನಲ್ಲಿ ಮಾತನಾಡಿ ಆದೇಶ ನೀಡುತ್ತಿದ್ದರು.



# ಜನರ ಪ್ರೀತಿಯ ಕುಮಾರಣ್ಣ

ಹಣ, ಅಧಿಕಾರ ಇದ್ದವರು ಬಹುತೇಕ ಸಂದರ್ಭದಲ್ಲಿ ಎಲ್ಲರಿಗೂ 'ಸಾಹೇಬ್ರು', 'ಅಪ್ಪಾಜಿ', 'ಅಣ್ಣಾ' ಆಗಿರುತ್ತಾರೆ. ಸಾಕಷ್ಟು ಸಂದರ್ಭದಲ್ಲಿ ಈ ರೀತಿ ಕರೆಯುವುದು ಕೇವಲ ತುಟಿಯ ಮೇಲಿನ ಮಾತಾಗಿರುತ್ತದೆಯೇ ಹೊರತು ಹೃದಯದಿಂದ ಬರುವ ಮಾತಾಗಿರುವುದಿಲ್ಲ. ಇದಕ್ಕೆ ಅಪವಾದ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ. ಅಧಿಕಾರ ಇರಲಿ ಅಥವಾ ಇಲ್ಲದಿರಲಿ. ತಮ್ಮ ಬಳಿ ಬಂದ ಯಾರನ್ನೇ ಆಗಲಿ ಹೆಗಲ ಮೇಲೆ ಕೈ ಹಾಕಿ, ಸಹಾಯ ಕೇಳಿ ಬಂದವರಿಗೆ ಸ್ಪಂದಿಸಿ, ಕೈಲಾದ ನೆರವು ನೀಡಿ ಅವರ ಬದುಕಿನಲ್ಲಿ ಭರವಸೆ ಮೂಡಿಸುವ ಕೆಲಸ ಮಾಡುವ ಮೂಲಕ ಕುಮಾರಸ್ವಾಮಿ 'ಕುಮಾರಣ್ಣ' ಆಗಿ ಬೆಳೆದ ರೀತಿಯೇ ವಿಶಿಷ್ಟವಾದದ್ದು.

- ಭಾವುಕ ಕುಮಾರಸ್ವಾಮಿ ಅವರದ್ದು ತಾಯಿಯಂತಹ ಮನಸ್ಸು
- ಬ್ರದರ್ ಎಂದು ಕಷ್ಟ– ಸುಖ ಆಲಿಸುವ ಜನಪ್ರಿಯ ನಾಯಕ



2006ರ ಮೊದಲು ಕೇವಲ ತಮ್ಮ ಆಪ್ತರಿಂದ 'ಕುಮಾರಣ್ಣ' ಎಂದೇ ಪ್ರೀತಿಯಿಂದ ಕರೆಸಿಕೊಳ್ಳುತ್ತಿದ್ದ ಕುಮಾರಸ್ವಾಮಿ ನಂತರ ಮುಖ್ಯಮಂತ್ರಿಯಾಗಿ ನಾಡಿನ ಉದ್ದಗಲಕ್ಕೂ 'ಕುಮಾರಣ್ಣ' ಆಗಿದ್ದು ಅಧಿಕಾರ, ಅಂತಸ್ತುಗಳಿಂದ ಅಲ್ಲ. ಬದಲಾಗಿ ತಮ್ಮ ಬಳಿ ಬಂದ ಪ್ರತಿಯೊಬ್ಬರಿಗೂ ಅಮ್ಮ, ಬ್ರದರ್ ಎಂದೇ ಕರೆದು ಮಾತನಾಡಿಸಿ ಅವರ ಕಷ್ಟ–ಸುಖ ಆಲಿಸುವ ಮೂಲಕ.

ಮೂಲತಃ ಕುಮಾರಸ್ವಾಮಿ ಅವರು ಕೊಂಚ ಹೆಚ್ಚು ಭಾವುಕರು. ಒಂದು ರೀತಿಯಲ್ಲಿ ತಾಯಿಯ ಮನಸ್ಸು. ಅಂಗವಿಕಲರು, ಅಸಹಾಯಕರನ್ನು ಕಂಡರೆ ಬೇಗ ಕರಗಿಬಿಡುತ್ತಾರೆ. ಸರ್ಕಾರದ ಮೂಲಕ ಸಹಾಯ ಮಾಡಲು ಆಗದಿದ್ದರೆ, ಕೈಯಿಂದಲೇ ಗರಿಷ್ಠ ಮಟ್ಟದಲ್ಲಿ ನೆರವು ನೀಡುವಂತಹ ಗುಣ ಇದೆ. ಇಂತಹ ಸ್ಪಂದಿಸುವ ಗುಣದಿಂದಲೇ ಬೀದರ್‌ನಿಂದ ಹಿಡಿದು ಮಂಗಳೂರು, ಬೆಳಗಾವಿಯಿಂದ ಹಿಡಿದು ಚಾಮರಾಜನಗರದವರೆಗೆ ಅವರು 'ಕುಮಾರಣ್ಣ' ಆದರು.

ಅಧಿಕಾರದ ಠೇಂಕಾರ, ದರ್ಪ, ಹಣ, ಅಂತಸ್ತು ಯಾವುದೂ ಶಾಶ್ವತ ಅಲ್ಲ ಎಂಬ ಕಟು ಸತ್ಯವನ್ನು ಸದಾ ಜಾಗೃತಿಯಲ್ಲಿಟ್ಟುಕೊಂಡ ಎಚ್.ಡಿ. ಕುಮಾರಸ್ವಾಮಿ ಅವರು ಜನರ ಹೃದಯದಲ್ಲಿ 'ಕುಮಾರಣ್ಣ' ಆಗಿದ್ದು ಕೇವಲ ಅಂತಃಕರಣ, ಕಷ್ಟಕ್ಕೆ ಮರುಗುವ, ಜನರ ಕಣ್ಣೀರು ಒರೆಸುವ, ಕೈ ಹಿಡಿದು ಮುನ್ನಡೆಸುವ ಕೆಲಸದ ಮೂಲಕ. ಬಹುಶಃ ಇಂತಹ ಹೆಗ್ಗಳಿಕೆ ಇತ್ತೀಚಿನ ವರ್ಷಗಳಲ್ಲಿ ಯಾರೂ ಗಳಿಸಿಲ್ಲ ಎಂದೇ ಹೇಳಬಹುದು.

# ಗ್ರಾಮದೊಳಗೊಂದಾದ ಕುಮಾರಣ್ಣ: ಮಾದರಿ ವಾಸ್ತವ್ಯ

ಮುಖ್ಯಮಂತ್ರಿಯ ಅಧಿಕಾರದ ಸೀಮಿತತೆಯನ್ನು ಬದಿಗೆ ಸರಿಸಿ ಮಾನವೀಯ ಮೌಲ್ಯಗಳೊಂದಿಗೆ ಜನರ ಅಹವಾಲು ಸ್ವೀಕರಿಸಿ ಸ್ಪಂದಿಸಿದ ಅತಿ ಕಡಿಮೆ ಮುಖ್ಯ ಮಂತ್ರಿಗಳಲ್ಲಿ ಕುಮಾರಸ್ವಾಮಿ ಒಬ್ಬರು. ಹೀಗಾಗಿಯೇ ಅವರ ಜನತಾ ದರ್ಶನ ಹಾಗೂ ಗ್ರಾಮ ವಾಸ್ತವ್ಯದ ಯಶಸ್ಸು ಜನರ ಮನಸ್ಸಲ್ಲಿ ಅಚ್ಚಳಿಯದೆ ಉಳಿದಿದೆ.

**20 ತಿಂಗಳಲ್ಲಿ 47 ಗ್ರಾಮ ವಾಸ್ತವ್ಯ**

2006ರಲ್ಲಿ ಕುಮಾರಸ್ವಾಮಿಯವರ ಗ್ರಾಮ ವಾಸ್ತವ್ಯ ಮೊದಲು ಆರಂಭಗೊಂಡಿದ್ದು ಅಥಣಿ ತಾಲೂಕಿನ ಪಿ.ಕೆ. ನಾಗನೂರು ಎಂಬ ಹಳ್ಳಿಯಲ್ಲಿ. ಕೃಷ್ಣಾ ನದಿಗೆ ಪ್ರವಾಹ ಬಂದ ಸಂದರ್ಭದಲ್ಲಿ ಪರಿಶೀಲನೆಗೆ ತೆರಳಿದ್ದ ಕುಮಾರಸ್ವಾಮಿ ಅವರಿಗೆ ಸಂಜೆ 6 ಗಂಟೆಯಾಗುತ್ತಿದ್ದಂತೆ ಅಧಿಕಾರಿಗಳು 'ಇಲ್ಲಿ ಉಳಿದುಕೊಳ್ಳುವುದಕ್ಕೆ ಸ್ಥಳವಿಲ್ಲ. ಹೀಗಾಗಿ ಬೆಳಗಾವಿಗೆ ತೆರಳೋಣ' ಎಂದು ಹೇಳಿದರು.

ಆಗ 'ಇಲ್ಲಿಯೇ ಯಾವುದಾದರೊಂದು ಮನೆಯಲ್ಲಿ ತಂಗೋಣ' ಎಂದು ಕುಮಾರಸ್ವಾಮಿ ಸೂಚಿಸಿ ನಾಗನೂರಿನ ಮಠದಲ್ಲಿ ತಂಗಿದ್ದರು. ಇದೇ ಗ್ರಾಮ ವಾಸ್ತವ್ಯವಾಗಿ ಪ್ರಚಾರ ಪಡೆದು ಯೋಜನೆಯ ರೂಪ ತಳೆಯಿತು. ತಮ್ಮ 20 ತಿಂಗಳ ಆಡಳಿತಾವಧಿಯಲ್ಲಿ ಕುಮಾರಸ್ವಾಮಿ 47 ಗ್ರಾಮದಲ್ಲಿ ವಾಸ್ತವ್ಯ ಮಾಡಿದ್ದು ಜನಮನ್ನಣೆ ಪಡೆದಿತ್ತು. ಯೋಜನೆಯ ಮೂಲಕ ಕುಮಾರಸ್ವಾಮಿ ಹೆಚ್ಚು ಜನಪ್ರಿಯರಾದರು.



# ಅನ್ನದಾತರ ಸಾಲಮನ್ನಾರಾಯಣ

## 25 ಸಾವಿರ ಕೋಟಿ ರು. ಸಾಲ ಮನ್ನಾ ಮಾಡಿ ರೈತರ ಋಣಭಾರ ಇಳಿಸಿದ ಎಚ್‌ಡಿಕೆ





ಅತ್ಯಂತ ಕಡಿಮೆ ಅವಧಿಯಲ್ಲಿ ಹತ್ತು ಹಲವು ಜನಪ್ರಿಯ ಯೋಜನೆ ತಂದ ದಳಪತಿ

ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಂಡು ರೈತರು ಅಭಿವೃದ್ಧಿಯಾಗಬೇಕೆಂದು ಇಸ್ರೇಲ್ ಮಾದರಿ ಕೃಷಿಯ ಕನಸನ್ನು ನನಸು ಮಾಡಲು ಕುಮಾರಸ್ವಾಮಿ ಅವರು ದಿಟ್ಟ ಹೆಜ್ಜೆಯನ್ನಿಟ್ಟಿದ್ದರು

ಉತ್ತಮ ಆಡಳಿತ ವ್ಯವಸ್ಥೆಯ ಹೆಗ್ಗುರುತುಗಳೆಂದರೆ ಸರ್ಕಾರ ಮತ್ತು ಜನತೆಯ ಕ್ರಿಯಾಶೀಲ ಸಹಭಾಗಿತ್ವ, ಪಾರದರ್ಶಕತೆ, ಸಾಮಾಜಿಕ ನ್ಯಾಯ. ಇವುಗಳೆಲ್ಲವನ್ನೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಆಡಳಿತದಲ್ಲಿ ಕಾಣಬಹುದು.

ಮುಖ್ಯಮಂತ್ರಿಯಾಗಿದ್ದ ವೇಳೆ ಎಚ್.ಡಿ. ಕುಮಾರಸ್ವಾಮಿ ಅವರು ಹಲವು ರೈತ ಪರ ಕಾರ್ಯಕ್ರಮಗಳನ್ನು ನೀಡಿದ್ದರು. ಸಾಲ ಮನ್ನಾ ಯೋಜನೆ, ಆತ್ಮಹತ್ಯೆಗೆ ಶರಣಾದ ರೈತರಿಗೆ ಸಹಾಯಧನ, ಇಸ್ರೇಲ್ ಮಾದರಿ ಕೃಷಿ, ನೀರಾವರಿ ಯೋಜನೆಗಳು ಸೇರಿದಂತೆ ಹಲವು ಜನಪರ ಕಾರ್ಯಕ್ರಮಗಳು ಅವರ ಕೊಡುಗೆಗಳು. ರೈತರ ಆರ್ಥಿಕ ಕಷ್ಟಕ್ಕೆ ಮಿಡಿಯುವ ಕುಮಾರಸ್ವಾಮಿ ಅವರು, ತಾವು ಮುಖ್ಯಮಂತ್ರಿಗಳಾಗಿದ್ದ ಎರಡು ಅವಧಿಯಲ್ಲೂ ರೈತ ಸಾಲ ಮನ್ನಾ ಮಾಡುವ ಮೂಲಕ ದಿಟ್ಟತನ ಪ್ರದರ್ಶಿಸಿದರು. ಇದೊಂದು ಕ್ರಾಂತಿಕಾರಿ ತೀರ್ಮಾನವಾಗಿತ್ತು. ಸಾಲ ಮನ್ನಾ ವಿಚಾರದಲ್ಲಿ ಮಿತ್ರ ಪಕ್ಷದೊಂದಿಗೆ ಅಕ್ಷರಶಃ ಗುದ್ದಾಡಿ ರೈತರ ಹಿತ ಕಾಯ್ದರು. 25 ಸಾವಿರ ಕೋಟಿ ರು. ಸಾಲ ಮನ್ನಾ ಮಾಡುವ ಮೂಲಕ ರೈತರಿಗೆ ಆರ್ಥಿಕ ಹೊರೆ ಇಳಿಸಿದರು. ಮೈತ್ರಿ ಸರ್ಕಾರದಲ್ಲಿ ಹಣಕಾಸು ಖಾತೆಯನ್ನು ಹೊಂದಿದ್ದ ಕುಮಾರಸ್ವಾಮಿ ಅವರು, ಮೊದಲ ಬಜೆಟ್‌ನಲ್ಲೇ ರೈತರ ಸಾಲ ಮನ್ನಾ ಯೋಜನೆಗೆ ₹12,650 ಕೋಟಿ ಅನುದಾನ ಮೀಸಲಿಟ್ಟಿದ್ದರು. ರೈತರ ಸಾಲ ಮನ್ನಾಕ್ಕೆ ಸಹಕಾರಿ ಬ್ಯಾಂಕುಗಳಿಗೆ ₹6150 ಕೋಟಿ ಹಾಗೂ ವಾಣಿಜ್ಯ ಬ್ಯಾಂಕುಗಳಿಗೆ ₹6550 ಕೋಟಿ ನಿಗದಿಪಡಿಸಿದ್ದರು. 2019-20ನೇ ಸಾಲಿನ ಬಜೆಟ್‌ನಲ್ಲಿ ಕುಮಾರಸ್ವಾಮಿ ಕೃಷಿ ಮತ್ತು ಸಂಬಂಧಿಸಿದ ಇಲಾಖೆಗಳಿಗೆ ಒಟ್ಟು ₹46,853 ಕೋಟಿ ಅನುದಾನ ಕೊಟ್ಟಿದ್ದರು. 2018ರ ಜುಲೈನಲ್ಲಿ ಸರ್ಕಾರ ರೈತರ ಸಾಲ ಪೂರ್ಣ ಮನ್ನಾ ಘೋಷಣೆ ಮಾಡಿತ್ತು. 2019ರ ಜನವರಿ 11 ರವರೆಗೆ 1.70 ಲಕ್ಷ ರೈತರ ಸಾಲಮನ್ನಾ ಆಗಿತ್ತು. ಇದಕ್ಕಾಗಿ ₹900 ಕೋಟಿ ಹಣ ಬಿಡುಗಡೆಯಾಯಿತು. ಬಳಿಕ ಎರಡು ಹಂತದಲ್ಲಿ ₹43 ಸಾವಿರ ಕೋಟಿ ಹಣವನ್ನು ಸಾಲ ಮನ್ನಾ ಯೋಜನೆಗೆ ಕುಮಾರಸ್ವಾಮಿ ಮೀಸಲಿಟ್ಟಿದ್ದರು. ಒಟ್ಟಾರೆ ರೈತರ 25 ಸಾವಿರ ಕೋಟಿ ರು. ಸಾಲವನ್ನು ಮುಖ್ಯಮಂತ್ರಿಗಳಾಗಿದ್ದಾಗ ಕುಮಾರಸ್ವಾಮಿ ಮನ್ನಾ ಮಾಡಿದ್ದರು.

## ಸಿರಿಧಾನ್ಯ ಬೆಳೆಗಾರರ ಉತ್ತೇಜಿಸಲು ರೈತ ಸಿರಿ

ಸಿರಿಧಾನ್ಯ ಬೆಳೆಗಾರರಿಗೆ ಉತ್ತೇಜನ ನೀಡಲು ರೈತಸಿರಿ ಯೋಜನೆಯನ್ನು ಕುಮಾರಸ್ವಾಮಿ ಘೋಷಿಸಿದ್ದರು. ಸಿರಿ ಧಾನ್ಯಗಳಾದ ಊದಲು, ನವಣೆ, ಆರ್ಕಾ, ಕೊರಲೆ, ಸಾಮೆ ಮತ್ತು ಬರಗು ಧಾನ್ಯಗಳನ್ನು ಪ್ರೋತ್ಸಾಹಿಸಲು ಯೋಜನೆಯನ್ನು ಪರಿಚಯಿಸಲಾಯಿತು. ಚಿತ್ರದುರ್ಗ, ಬಳ್ಳಾರಿ, ತುಮಕೂರು, ಕೊಪ್ಪಳ, ಬೆಳಗಾವಿ, ವಿಜಯಪುರ, ಬಾಗಲಕೋಟೆ, ಕಲಬುರಗಿ, ಹಾಸನ ಮತ್ತು ಹಾವೇರಿ ಜಿಲ್ಲೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲು ಕುಮಾರಸ್ವಾಮಿ ತೀರ್ಮಾನಿಸಿದ್ದರು. ಈ ಯೋಜನೆಯಡಿಯಲ್ಲಿ ನವಣೆ, ಕೊರಲೆ, ಸಾಮೆ, ಬರಗು, ಊದಲು ಬೆಳೆಗಳನ್ನು ಬೆಳೆಯುವ ರೈತರಿಗೆ ಒಂದು ಹೆಕ್ಟೇರ್‌ಗೆ 10 ಸಾವಿರ ರು.ನಂತೆ 2 ಹೆಕ್ಟೇರ್‌ವರೆಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಸಿರಿಧಾನ್ಯಗಳ ಪ್ರದೇಶ ವಿಸ್ತರಣೆ ಮತ್ತು ಸಿರಿಧಾನ್ಯಗಳ ಉತ್ಪಾದನೆಗೆ ಪೂರಕವಾದ ಸುಧಾರಿತ ತಾಂತ್ರಿಕತೆಗಳನ್ನು ಸೂಕ್ತ ಸಮಯದಲ್ಲಿ ಅಳವಡಿಸಿ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಪ್ರಾಥಮಿಕ ಸಂಸ್ಕರಣ ಘಟಕಗಳ ಸ್ಥಾಪನೆಗಾಗಿ ಪ್ರೋತ್ಸಾಹ ಧನ ಪಡೆಯಬಹುದಾಗಿದೆ.



## ಸುವರ್ಣ ಗ್ರಾಮ ಯೋಜನೆ

ಬಿಜೆಪಿ- ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಜಾರಿಗೊಳಿಸಿದ ಸುವರ್ಣ ಗ್ರಾಮ ಯೋಜನೆಯು ವಿನೂತನ ಕಾರ್ಯಕ್ರಮ. ಗ್ರಾಮೀಣ ಅಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರ ದೂರದೃಷ್ಟಿತ್ವವನ್ನು ಹೊಂದುವ ಮೂಲಕ ಬಲಿಷ್ಠ ಗ್ರಾಮ ಸಮುದಾಯಗಳನ್ನು ಅಭಿವೃದ್ಧಿಪಡಿಸುವುದಾಗಿತ್ತು. ವಿಶಾಲ ಕರ್ನಾಟಕದ ಸುವರ್ಣ ಗ್ರಾಮೋದಯ ಯೋಜನೆಯನ್ನು ಕುಮಾರಸ್ವಾಮಿ ಸರ್ಕಾರ ಜಾರಿಗೆ ತಂದಿತ್ತು. ಒಂದು ಸಾವಿರ ಗ್ರಾಮಗಳನ್ನು ಪ್ರತಿವರ್ಷ ಮಾದರಿ ಗ್ರಾಮವನ್ನಾಗಿ ರೂಪಿಸುವುದು ಕುಮಾರಸ್ವಾಮಿ ಅವರ ಕನಸಾಗಿತ್ತು. ಗ್ರಾಮಗಳಿಗೆ ಎಲ್ಲಾ ರೀತಿಯ ಮೂಲಸೌಕರ್ಯ ನೀಡಿ ಅಭಿವೃದ್ಧಿ ಮಾಡುವ ಗುರಿಯನ್ನು ಹೊಂದಿದ್ದರು. ಗ್ರಾಮಗಳ ಅಭಿವೃದ್ಧಿಯಾದರೆ ರಾಜ್ಯ, ದೇಶ ಅಭಿವೃದ್ಧಿಯಾಗಲಿದೆ ಎಂಬುದನ್ನು ಮನಗಂಡಿದ್ದರು. ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದ್ದರು. ಆದರೆ ಈ ಯೋಜನೆ ಈಗ ಅಸ್ತಿತ್ವದಲ್ಲಿಲ್ಲ. ಬೇರೊಂದು ಯೋಜನೆಯನ್ನು ನಂತರ ಬಂದ ಸರ್ಕಾರ ಜಾರಿಗೊಳಿಸಿದೆ.

## ಕೆಆರ್‌ಎಸ್‌ನಲ್ಲಿ ಡಿಸ್ನಿಲ್ಯಾಂಡ್ ಸೃಷ್ಟಿ ಕನಸು ಕಂಡಿದ್ದ ಎಚ್‌ಡಿಕೆ

### ಹಲವು ನೀರಾವರಿ ಯೋಜನೆಗಳಿಗೆ ವೇಗ ಮೇಕೆದಾಟು, ಕೃಷ್ಣಾ, ಭದ್ರಾಗೆ ಒತ್ತು



ರಾಜ್ಯದಲ್ಲಿ ನೀರಾವರಿ ಸೌಲಭ್ಯ ಅಭಿವೃದ್ಧಿಗೆ ಹಾಗೂ ವಿವಿಧ ನದಿಗಳಲ್ಲಿ ರಾಜ್ಯದ ಪಾಲಿನ ನೀರನ್ನು ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಎಚ್.ಡಿ. ಕುಮಾರಸ್ವಾಮಿ ಆದ್ಯತೆ ನೀಡಿದ್ದರು. ಮೇಕೆದಾಟು ಯೋಜನೆಗೆ ವಿವರವಾದ ಯೋಜನಾ ವರದಿ ತಯಾರಿಸಲು ಕೇಂದ್ರದ ಜಲ ಆಯೋಗ ಒಪ್ಪಿಗೆ ನೀಡಿದ ಬಳಿಕ ವಿವರವಾದ ಯೋಜನಾ ವರದಿ ಸಲ್ಲಿಸಲಾಯಿತು. ಕೃಷ್ಣಾ ಮೇಲ್ದಂಡೆ ಹಂತ-3ರಡಿ ಬರುವ 9 ಉಪಯೋಜನೆಗಳ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಕ್ರಮವಹಿಸಿದ್ದರು.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ ಕುಡಿಯುವ ನೀರಿನ ತೀವ್ರ ಅಭಾವ ಎದುರಿಸುತ್ತಿರುವ ರಾಜ್ಯದ ಹಾಸನ, ಚಿಕ್ಕಮಗಳೂರು, ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಸುರಕ್ಷಿತ ಕುಡಿಯುವ ನೀರು ಒದಗಿಸುವ ಮತ್ತು ಅಂತರ್ಜಲ ಮರುಪೂರಣಕ್ಕಾಗಿ ಸುಮಾರು 572 ಸಣ್ಣ ನೀರಾವರಿ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಯಿತು. ಕೃಷ್ಣರಾಜ ಸಾಗರ ಅಣೆಕಟ್ಟೆಯ ಬೃಂದಾವನ ಉದ್ಯಾನವನವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಅಮೆರಿಕದ ಡಿಸ್ನಿಲ್ಯಾಂಡ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸುವ ಕುರಿತು ಆಯವ್ಯಯದಲ್ಲಿ ಘೋಷಿಸಿದ್ದರು. ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಒಟ್ಟು 5,57,022 ಎಕರೆ ಮತ್ತು ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳ 367 ಸಣ್ಣ ನೀರಾವರಿ ಕೆರೆಗಳಿಗೆ ನೀರೊದಗಿಸುವ ಯೋಜನೆಯ ಕಾಮಗಾರಿಗಳ ಪ್ರಗತಿಯನ್ನು ತೀವ್ರಗೊಳಿಸಿದರು.



## ಶಾಲಾ ಮಕ್ಕಳಿಗಾಗಿ ಸಂಪರ್ಕ ಸೇತುವೆ ನಿರ್ಮಾಣ

### ಮಲೆನಾಡು, ಕರಾವಳಿಗೆ ₹100 ಕೋಟಿ ನೆರವು ನೀಡಿದ್ದ ಕುಮಾರಸ್ವಾಮಿ

ರಾಜ್ಯದ ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಮಳೆಗಾಲದಲ್ಲಿ ಮಕ್ಕಳು ಶಾಲೆಯಿಂದ ಹೊರಗೆ ಉಳಿಯಬಾರದು ಎಂಬ ಸದುದ್ದೇಶದಿಂದ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 'ಶಾಲಾ ಸಂಪರ್ಕ ಸೇತು' ಯೋಜನೆ ಘೋಷಿಸಿದ್ದರು. ಮಳೆಗಾಲದಲ್ಲಿ ತೀರ್ಥಹಳ್ಳಿ ತಾಲೂಕಿನ ಶಾಲಾ ವಿದ್ಯಾರ್ಥಿನಿಯೊಬ್ಬಳು ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದಳು. ಅದೇ ವೇಳೆ ಶಿವಮೊಗ್ಗ ಜಿಲ್ಲೆಯಲ್ಲಿ ವಾಸ್ತವ್ಯ ಹೂಡಿದ್ದ ಕುಮಾರಸ್ವಾಮಿ, ಈ ಘಟನೆ ಕಂಡು ಮರುಕ ವ್ಯಕ್ತಪಡಿಸಿ ಗುಡ್ಡಗಾಡು ಪ್ರದೇಶದ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಆಲೋಚನೆ ನಡೆಸಿದ್ದರು. ಅಂದಾಜು 100 ಕೋಟಿ ರು. ವೆಚ್ಚದಲ್ಲಿ ಕಾಲುಸಂಕ ಇರುವೆಡೆ ದ್ವಿಚಕ್ರ ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ 1ರಿಂದ 3 ಮೀ. ಅಗಲದ ಸೇತುವೆ ನಿರ್ಮಾಣಕ್ಕೆ ಸೂಚನೆ ನೀಡಿದ್ದರು.

## ರೈತರಿಗಾಗಿ ಋಣ ಪರಿಹಾರ ಕಾಯ್ದೆ

### ಎಚ್‌ಡಿಕೆ ಕೊನೆಯ ನಿರ್ಧಾರವೂ ರೈತರ ಪರ

ಅಧಿಕಾರ ಕಳೆದುಕೊಂಡ ಕೊನೆ ದಿನವೂ ಕುಮಾರಸ್ವಾಮಿ ಅವರ ಹೃದಯ ರೈತರಿಗೆ ಮಿಡಿಯಿತು. ಖಾಸಗಿ ವ್ಯಕ್ತಿಗಳಿಂದ ಸಣ್ಣ ಸಣ್ಣ ಹಿಡುವಳಿದಾರರ ಕಣ್ಣೀರು ಒರೆಸಿದರು. ಅವರ ಬದುಕಿಗೆ ಆಶಾಕಿರಣ ಮೂಡಿಸಿದ್ದರು. ಖಾಸಗಿ ಹಣಕಾಸು ಸಂಸ್ಥೆಗಳು ವ್ಯಕ್ತಿಗಳಿಂದ ಪಡೆದಿದ್ದ ಸಾಲವನ್ನು ಮನ್ನಾ ಮಾಡುವ ಮಹತ್ವದ 'ಕರ್ನಾಟಕ ಋಣ ಪರಿಹಾರ ಕಾಯ್ದೆ' ಮಸೂದೆಯನ್ನು ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸುವ ದಿನ ಜಾರಿಗೆ ತಂದರು. 'ಭೂರಹಿತರು, ಕಾರ್ಮಿಕರು, ಬಡವರ ಆದಾಯ 1.20 ಲಕ್ಷಗಳಿಗಿಂತ ಕಡಿಮೆ ಇದ್ದರೆ ಅವರಿಗೆ ಈ ಕಾಯ್ದೆ ಅನ್ವಯವಾಗಲಿದೆ. ಋಣ ಮುಕ್ತ ಕಾಯ್ದೆಯಡಿ ರೈತರು ಋಣ ಮುಕ್ತರಾಗಲಿದ್ದಾರೆ. ಒಂದು ವರ್ಷಗಳ ಅವಧಿಗೆ ಈ ಕಾಯ್ದೆ ಇರಲಿದೆ' ಎಂದು ಕುಮಾರಸ್ವಾಮಿ ಘೋಷಿಸಿದ್ದರು.

## ಆತ್ಮಹತ್ಯೆಗೆ ಶರಣಾದ ರೈತರಿಗೆ ₹2690 ಕೋಟಿ ಪ್ಯಾಕೇಜ್

ರೈತರ ಬಗ್ಗೆ ಅಪಾರ ಕಳಕಳಿಯನ್ನು ಹೊಂದಿರುವ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಆರು ಜಿಲ್ಲೆಯಲ್ಲಿ ಆತ್ಮಹತ್ಯೆಗೆ ಶರಣಾದ ರೈತ ಕುಟುಂಬಗಳಿಗೆ 2689.64 ಕೋಟಿ ರು. ಪರಿಹಾರ ಪ್ಯಾಕೇಜ್ ಘೋಷಣೆ ಮಾಡಿದ್ದರು. ಬೆಳಗಾವಿ, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಯ ರೈತರಿಗೆ ಪರಿಹಾರ ನೀಡಿದ್ದರು. ರೈತರ ಪರ ಹೋರಾಟದಲ್ಲಿ ಸದಾ ಮುಂಚೂಣಿಯಲ್ಲಿದ್ದ ಕುಮಾರಸ್ವಾಮಿ ರೈತರ ನೋವಿಗೆ ಮಿಡಿಯುತ್ತಿದ್ದರು. ರೈತರಿಗೆ ಮನೋಸ್ಥೈರ್ಯ ತುಂಬುವುದರಲ್ಲಿ ಕುಮಾರಸ್ವಾಮಿ ಸದಾ ಮುಂದಿದ್ದರು.

## ಇಸ್ರೇಲ್ ಮಾದರಿ ಕೃಷಿಗೆ ಯತ್ನಿಸಿದ್ದ ಎಚ್‌ಡಿಕೆ

### ರಾಜ್ಯದ ರೈತರನ್ನು ಸಂಕಷ್ಟದಿಂದ ಪಾರು ಮಾಡಲು ಪ್ರಯತ್ನಿಸಿದ್ದ ಕುಮಾರಸ್ವಾಮಿ

ಕೃಷಿ ಕ್ಷೇತ್ರವನ್ನು ಬಲಪಡಿಸುವ ಉದ್ದೇಶದಿಂದ ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವ ಪ್ರಯತ್ನವನ್ನು ಕುಮಾರಸ್ವಾಮಿ ನಡೆಸಿದರು. ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಂಡು ರೈತರು



ಅಭಿವೃದ್ಧಿಯಾಗಬೇಕೆಂದು ಇಸ್ರೇಲ್ ಮಾದರಿಯನ್ನು ಜಾರಿಗೆ ತರಬೇಕೆಂಬ ಕನಸನ್ನು ನನಸು ಮಾಡಲು ದಿಟ್ಟ ಹೆಜ್ಜೆಯನ್ನಿಟ್ಟಿದ್ದರು. ನಾಡಿನ ರೈತರ ಸಂಕಷ್ಟಕ್ಕೆ ಸಾಂಪ್ರದಾಯಿಕ ಕೃಷಿ ಪದ್ಧತಿ ಸಹ ಪ್ರಮುಖವಾದ ಕಾರಣವಾಗಿದೆ ಎಂಬುದನ್ನು ಅವರು ಮನಗಂಡಿದ್ದರು. ರಾಜ್ಯದ ವಿವಿಧ ಕೃಷಿ ವಿಶ್ವವಿದ್ಯಾಲಯಗಳಿಗೆ ಒಂದೊಂದು ಜವಾಬ್ದಾರಿ ನೀಡಿ ಅನುಷ್ಠಾನಕ್ಕೆ ಕ್ರಮ ಜರುಗಿಸಲಾಗಿತ್ತು. ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಗೆ ಹೊಂದಿಕೊಳ್ಳುವಂತಹ ನೂತನ 35 ತಳಿಗಳನ್ನು ಗುರುತಿಸುವಂತೆ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿದರು. ಶಿವಮೊಗ್ಗ ಕೃಷಿ ವಿವಿಯಲ್ಲಿ ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಅಳವಡಿಕೆಗೆ ಸಂಬಂಧಿಸಿದಂತೆ ನೂತನವಾಗಿ ಒಂದು ವರ್ಷದ ಅವಧಿಯ ಕೋರ್ಸ್ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಯಿತು. ಈ ಕೋರ್ಸ್‌ನಲ್ಲಿ ನಾಲ್ಕು ತಿಂಗಳ ತರಗತಿ ಮತ್ತು ಎಂಟು ತಿಂಗಳ ಕಾಲ ಕೃಷಿ ಭೂಮಿಯಲ್ಲಿ ಪ್ರಾಯೋಗಿಕ ತರಬೇತಿ ನೀಡುವಂತೆ ನಿಯಮಗಳನ್ನು ಸಿದ್ಧಪಡಿಸಲು ಕ್ರಮ ಕೈಗೊಂಡರು. ಒಂದು, ಎರಡು ಮತ್ತು ಮೂರು ಎಕರೆ ಭೂಮಿಯಲ್ಲಿ ಪಾಲಿ ಹೌಸ್ ನಿರ್ಮಾಣ, ವೈಜ್ಞಾನಿಕವಾಗಿ ನೀರಿನ ಬಳಕೆ, ಬೆಳೆಯ ನಿರ್ವಹಣೆ ಮತ್ತು ಬೆಳೆ ಕೊಯ್ಲು ಕುರಿತು ಪ್ರಾತ್ಯಕ್ಷಿಕೆಗಳ ಮಾದರಿಗಳನ್ನು ಸಿದ್ಧಪಡಿಸಲು ಬೆಂಗಳೂರು ಕೃಷಿ ವಿದ್ಯಾಲಯಕ್ಕೆ ಸೂಚಿಸಲಾಗಿತ್ತು. ವೈಜ್ಞಾನಿಕವಾಗಿ ಕೃಷಿ ಪದ್ಧತಿ ಅಳವಡಿಸಿಕೊಳ್ಳುವ ಸಂಬಂಧ ರೈತರಿಗೆ ಮೂರು ಮತ್ತು ಐದು ದಿನಗಳ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲು ಯೋಜನೆ ಸಿದ್ಧಪಡಿಸಲು ಧಾರವಾಡ ಕೃಷಿ ವಿವಿಗೆ ಹೊಣೆಗಾರಿಕೆ ನೀಡಲಾಗಿತ್ತು.

ಕನ್ನಡಪ್ರಭ
ಬುಧವಾರ
16.12.2020




## ಎಚ್‌ಡಿಕೆ ದೂರದೃಷ್ಟಿಯ ಯೋಜನೆ

# ಕಾಂಪೀಟ್ ವಿತ್ ಚೀನಾ

### ಆತ್ಮನಿರ್ಭರ ಯೋಜನೆಗೆ ಅಂದೇ ಅಡಿಗಲ್ಲು ಇಟ್ಟಿದ್ದ ಕುಮಾರಣ್ಣ
### 9 ಜಿಲ್ಲೆಗಳಲ್ಲಿ 9 ಲಕ್ಷ ಉದ್ಯೋಗ ಸೃಷ್ಟಿಸಲು ವಿಶಿಷ್ಟ ಯೋಜನೆ

ಪೂರ್ವ ಲಡಾಖ್ ಗಡಿಯಲ್ಲಿ ಸೃಷ್ಟಿಯಾಗಿರುವ ಸಂಘರ್ಷದ ಹಿನ್ನೆಲೆಯಲ್ಲಿ ಚೀನಾ ಉತ್ಪನ್ನಗಳನ್ನು ಬಹಿಷ್ಕರಿಸಬೇಕು ಎಂಬ ಕೂಗು ದೇಶದಲ್ಲಿ ಬಲವಾಗಿ ಎದ್ದಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೂಡ ಚೀನಾ ಉತ್ಪನ್ನಗಳ ಆಮದು ಕಡಿಮೆ ಮಾಡಲು ಆತ್ಮನಿರ್ಭರ (ಸ್ವಾವಲಂಬಿ) ಮಂತ್ರ ಜಪಿಸುವ ಮೂಲಕ ಸ್ವದೇಶಿ ವಸ್ತುಗಳನ್ನೇ ಬಳಸುವಂತೆ ಜನತೆಗೆ ಪದೇ ಪದೇ ಕರೆ ನೀಡುತ್ತಿದೆ. ಅದಲ್ಲದೆ ಚೀನಾ ತೊರೆಯುವ ಕಂಪನಿಗಳಿಗೆ ಕೇಂದ್ರ ಸರ್ಕಾರ ಹಾಗೂ ವಿವಿಧ ರಾಜ್ಯ ಸರ್ಕಾರಗಳು ರತ್ನಗಂಬಳಿ ಹಾಸುತ್ತಿವೆ. ಆದರೆ ಮೋದಿ ಅವರಿಗಿಂತಲೂ ಮುನ್ನವೇ ಆತ್ಮನಿರ್ಭರ ಕನಸು ಕಂಡಿದ್ದವರು ಕುಮಾರಸ್ವಾಮಿ.

2018ರಲ್ಲಿ ಕಾಂಗ್ರೆಸ್ ಜತೆಗೂಡಿ ಮೈತ್ರಿ ಸರ್ಕಾರ ರಚಿಸಿದ ಕುಮಾರಸ್ವಾಮಿ ಅವರು ಬೆಂಗಳೂರಿನಿಂದಾಚೆ ಇರುವ 2 ಹಾಗೂ 3ನೇ ಹಂತದ ನಗರಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಹಾಗೂ ಚೀನಾದ ಮೇಲಿನ ಅವಲಂಬನೆ ತಪ್ಪಿಸಲು ಯೋಜನೆಯೊಂದನ್ನು ಘೋಷಿಸಿದ್ದರು. ಅದುವೆ– ಕಾಂಪೀಟ್ ವಿತ್ ಚೀನಾ. ಅಂದರೆ ಚೀನಾ ಉತ್ಪನ್ನಗಳಿಗೆ ಪೈಪೋಟಿ ನೀಡುವ ರೀತಿಯಲ್ಲಿ ದೇಶೀಯ ಉತ್ಪನ್ನಗಳನ್ನು ತಯಾರಿಸುವುದು. 9 ಜಿಲ್ಲೆಗಳಲ್ಲಿ 9 ಲಕ್ಷ ಉದ್ಯೋಗ ಸೃಷ್ಟಿ ಗುರಿಯೊಂದಿಗೆ 'ಕಾಂಪೀಟ್ ವಿತ್ ಚೀನಾ' ಎಂಬ ಮಹತ್ವಾಕಾಂಕ್ಷಿ ಯೋಜನೆ ಜಾರಿಗೆ ಮುಂದಾಗಿದ್ದರು. ಯೋಜನೆಯಡಿ ರಾಜ್ಯದ 9 ಜಿಲ್ಲೆಗಳಲ್ಲಿ ಕ್ಲಸ್ಟರ್‌ಗಳನ್ನು ಸ್ಥಾಪಿಸಿ ಆಯಾ ಪ್ರದೇಶದ ಸಂಪನ್ಮೂಲ, ವೃತ್ತಿ ಕೌಶಲ್ಯ ಆಧರಿಸಿ ಕೈಗಾರಿಕೆಗಳ ಸ್ಥಾಪನೆಗೆ ಕ್ರಮ ಕೈಗೊಂಡಿದ್ದರು. ಈ ಜಿಲ್ಲೆಗಳಲ್ಲಿ ಕೈಗಾರಿಕಾ ತರಬೇತಿಗೆ 500 ಕೋಟಿ ರು. ಅನುದಾನ ಮೀಸಲಿಟ್ಟು, ಪ್ರತಿ ಜಿಲ್ಲೆಯಲ್ಲಿ 1 ಲಕ್ಷ ಉದ್ಯೋಗ ಸೃಷ್ಟಿಯ ನಿರೀಕ್ಷೆ ಹೊಂದಿದ್ದರು. ಮೋದಿ ಅವರು ಈಗ ಸ್ವದೇಶಿ ಉತ್ಪನ್ನಗಳಿಗೆ ಒತ್ತು ನೀಡುವಂತೆ ದೇಶವಾಸಿಗಳಿಗೆ ಮನವಿ ಮಾಡುತ್ತಿದ್ದಾರೆ. ಆದರೆ ಕುಮಾರಸ್ವಾಮಿ ಇಂತಹದ್ದೊಂದು ಆಲೋಚನೆಯನ್ನು ಮೊದಲೇ ಹೊಂದಿದ್ದರು ಎಂಬುದನ್ನು ಕಾಂಪೀಟ್ ವಿತ್ ಚೀನಾ ನಿರೂಪಿಸುತ್ತದೆ.




## ಪೊಲೀಸರ ಸಂಬಳ ಹೆಚ್ಚಿಸಿದರು

### ಔರಾದ್ಕರ್ ವರದಿಗೆ ಒಪ್ಪಿಗೆ ನೀಡಿದ ಎಚ್‌ಡಿಕೆ

ಪೊಲೀಸ್ ಸಿಬ್ಬಂದಿಯ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಔರಾದ್ಕರ್ ವರದಿ ಜಾರಿಗೊಳಿಸಲು ಒಪ್ಪಿಗೆ ನೀಡಿದ ಹೆಗ್ಗಳಿಕೆ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಮತ್ತು ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲುತ್ತದೆ. ಪೊಲೀಸರಿಗೆ ವೇತನ ಪರಿಷ್ಕರಿಸಬೇಕು, ಇತರೆ ಸರ್ಕಾರಿ ಇಲಾಖೆಗಳ ಸಿಬ್ಬಂದಿಗೆ ಸರಿಸಮಾನವಾಗಿ ವೇತನ ನೀಡಬೇಕು ಎಂಬ ಬೇಡಿಕೆ ಹಲವು ವರ್ಷಗಳಿಂದ ಕೇಳಿಬರುತ್ತಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 2016ರಲ್ಲಿ ಹಿರಿಯ ಐಪಿಎಸ್ ಅಧಿಕಾರಿ ರಾಘವೇಂದ್ರ ಔರಾದ್ಕರ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗಿತ್ತು. ಆ ಸಮಿತಿ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಹಲವು ಶಿಫಾರಸುಗಳನ್ನು ಒಳಗೊಂಡ ವಿಸ್ತೃತ ವರದಿ ಸಲ್ಲಿಸಿದರೂ ಅದನ್ನು ಆಗಿನ ಸರ್ಕಾರ ಅಂಗೀಕರಿಸಲು ಸಾಧ್ಯವಾಗಲಿಲ್ಲ. 2018ರಲ್ಲಿ ಕುಮಾರಸ್ವಾಮಿ ನೇತೃತ್ವದ ಸರ್ಕಾರ ವರದಿ ಸ್ವೀಕರಿಸಿ ಆದೇಶವನ್ನೂ ಹೊರಡಿಸಿತು.

## ಬೆಳಗಾವಿ ಸುವರ್ಣಸೌಧ ರೂವಾರಿ

### ಬೆಳಗಾವಿಯಲ್ಲಿ ಮೊದಲು ಅಧಿವೇಶನ ನಡೆಸಿದ್ದೇ ಕುಮಾರಸ್ವಾಮಿ



ಗಡಿ ಹಾಗೂ ಉತ್ತರ ಕರ್ನಾಟಕದ ಬಗ್ಗೆ ವಿಶೇಷ ಕಾಳಜಿ ವಹಿಸಿದ್ದ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಬೆಳಗಾವಿ ಜಿಲ್ಲೆಗೆ ತಮ್ಮದೆಯಾದ ವಿಶೇಷ ಕೊಡುಗೆ ನೀಡಿದ್ದಾರೆ. 2006ರ ಸೆಪ್ಟೆಂಬರ್ ತಿಂಗಳಲ್ಲಿ ಬೆಳಗಾವಿಯಲ್ಲಿ ವಿಶೇಷ ಅಧಿವೇಶನ ನಡೆಸುವ ಬಗ್ಗೆ ಗಟ್ಟಿತನದ ನಿರ್ಧಾರವನ್ನು ಬೆಂಗಳೂರಿನಲ್ಲಿ ನಡೆದ ಅಧಿವೇಶನದಲ್ಲಿ ಪ್ರಕಟಿಸಿದ್ದರು. ಆದರೆ ಶಾಸಕರಿಗೆ, ಸಚಿವರಿಗೆ ಸೇರಿದಂತೆ ಆಡಳಿತ ವರ್ಗಕ್ಕೆ ಏಕಾಏಕಿ ನಿರ್ಧಾರವನ್ನು ಒಪ್ಪಿಕೊಳ್ಳುವುದು ಕಷ್ಟಸಾಧ್ಯವಾಗಿತ್ತು. ಅಧಿವೇಶನ ನಡೆಸಲು ಸ್ಥಳದ ಸಮಸ್ಯೆ ಎದುರಾಗಿತ್ತು. ಆದರೆ ಕುಮಾರಸ್ವಾಮಿ ಅವರು ತೆಗೆದುಕೊಂಡ ನಿರ್ಧಾರದಂತೆ ಬೆಳಗಾವಿ ಜೆಎನ್ಎಂಸಿ ಕಾಲೇಜು ಆವರಣದಲ್ಲಿ ವಿಶೇಷ ಅಧಿವೇಶನ ನಡೆಸುವ ಮೂಲಕ ರಾಜ್ಯ ಅಷ್ಟೇ ಅಲ್ಲದೇ ಇಡೀ ರಾಷ್ಟ್ರದ ಗಮನ ಸೆಳೆದಿದ್ದರು. 2007ರಲ್ಲಿ ಬೆಳಗಾವಿಯಲ್ಲಿ ಸುವರ್ಣ ವಿಧಾನ ಸೌಧ ನಿರ್ಮಾಣದ ಬಗ್ಗೆ ಘೋಷಣೆ ಮಾಡಿದರು. ಬೆಳಗಾವಿ ವ್ಯಾಕ್ಸಿನ್ ಡಿಪೋದಲ್ಲಿ 2007ರಲ್ಲಿ ಮೊದಲ ಬಾರಿಗೆ ಸುವರ್ಣ ವಿಧಾನಸೌಧ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದರು. ಹೀಗಾಗಿ ಈ ಭಾಗದಲ್ಲಿ ಮತ್ತೊಂದು ಶಕ್ತಿ ಕೇಂದ್ರವನ್ನು ತಂದುಕೊಟ್ಟ ಕೀರ್ತಿ ಕುಮಾರಸ್ವಾಮಿ ಅವರಿಗೇ ಸಲ್ಲುತ್ತದೆ. ಇದಾದ ಬಳಿಕ 2009ರಲ್ಲಿ ಹಲಗಾ–ಬಸ್ತವಾಡ ಬಳಿಗೆ ಕಟ್ಟಡವನ್ನು ಸ್ಥಳಾಂತರ ಮಾಡಲಾಯಿತು.

## ಧಾರವಾಡ ಹೈಕೋರ್ಟ್‌ಗೆ ಶಂಕು

ಉತ್ತರ ಕರ್ನಾಟಕದ ಬಗ್ಗೆ ವಿಶೇಷ ಕಾಳಜಿ ಹೊಂದಿ, ಆ ಭಾಗಕ್ಕೆ ಅನೇಕ ವಿಧಾಯಕ ಕಾರ್ಯಕ್ರಮಗಳನ್ನು ನೀಡಿದ್ದ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರ ಸ್ವಾಮಿ ಅವರು ಧಾರವಾಡದ ಹೈಕೋರ್ಟ್ ಪೀಠ ಸ್ಥಾಪನೆಯಲ್ಲೂ ಪ್ರಮುಖ ಪಾತ್ರ ವಹಿಸಿದ್ದಾರೆ. ಮುಖ್ಯಮಂತ್ರಿಗಳಾಗಿದ್ದಾಗ 2006ರಲ್ಲಿ ಧಾರವಾಡ ಹೈಕೋರ್ಟ್ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿದ್ದರು ಎಂಬುದು ಹೆಮ್ಮೆಯ ವಿಷಯ. ಕುಮಾರಸ್ವಾಮಿ ಅವರು ಧಾರವಾಡದ ಹೈಕೋರ್ಟ್ ಕಟ್ಟಡ ನಿರ್ಮಾಣಕ್ಕೆ 400 ಕೋಟಿ ರು. ಅನುದಾನ ಒದಗಿಸಿದ್ದಲ್ಲದೇ ಕಟ್ಟಡಕ್ಕೆ ಶಂಕುಸ್ಥಾಪನೆ ಸಹ ಮಾಡಿದರು. ತದನಂತರ 2008ರಲ್ಲಿ ಹೈಕೋರ್ಟ್ ಪೀಠ ಉದ್ಘಾಟನೆಗೊಂಡಿತು. ಆರಂಭದಲ್ಲಿ ಸಂಚಾರಿ ಪೀಠ ಇದ್ದು ನಂತರದಲ್ಲಿ ಪ್ರಕರಣಗಳು ಜಾಸ್ತಿ ಯಾದಂತೆ ಸಂಪೂರ್ಣ ಪೀಠವಾಗಿ ಪರಿವರ್ತನೆಗೊಂಡಿತು. ಸುದೀರ್ಘ ಹೋರಾಟದ ಫಲವಾಗಿ 1996ರಿಂದ ಬಿ.ಡಿ. ಹಿರೇಮಠ ಅವರು ಈ ಹೋರಾಟದ ಮುಂಚೂಣಿ ವಹಿಸಿ ಹೋರಾಟವನ್ನು ಒಂದು ಹಂತಕ್ಕೆ ತಂದರು. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಿದ್ದಾಗ ಅನೇಕ ಹೋರಾಟಗಳನ್ನು ಸಹ ಮಾಡಲಾಯಿತು. ಹೋರಾಟದ ತೀವ್ರತೆ ಅರಿತು ಸರ್ಕಾರ ಸಹ ಸ್ಪಂದನೆ ಮಾಡಿ ಈ ಭಾಗದ ಜನರಿಗೆ ಅನುಕೂಲವಾಗುವ ಹೈಕೋರ್ಟ್ ಸ್ಥಾಪನಗೆ ಒಪ್ಪಿಗೆ ಸೂಚಿಸಿದ್ದು ಇದೀಗ ಇತಿಹಾಸ.

### ಮೀಟರ್ ಬಡ್ಡಿಯಿಂದ ಬಡವರನ್ನು ಪಾರು ಮಾಡಿದ ನಾಯಕ

## ಮೋದಿಗೆ ಮಾದರಿಯಾಯ್ತು ಎಚ್‌ಡಿಕೆ 'ಬಡವರ ಬಂಧು'

### ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ನೀಡಲು ಕೇಂದ್ರದಿಂದಲೂ ಯೋಜನೆ
### ಕೇಂದ್ರ ಸರ್ಕಾರಕ್ಕೂ ಮುನ್ನ ಕರ್ನಾಟಕದಲ್ಲಿ ಯೋಜನೆ ತಂದಿದ್ದ ಎಚ್‌ಡಿಕೆ



ದೇಶಕ್ಕೆ ಕೊರೋನಾ ವೈರಸ್ ವಕ್ಕರಿಸಿದ ಬಳಿಕ ಕೇಂದ್ರ ಸರ್ಕಾರ ಜಾರಿಗೆ ತಂದ ಹಲವು ಯೋಜನೆಗಳಲ್ಲಿ 'ಪಿಎಂ– ಸ್ವನಿಧಿ' ಕೂಡ ಒಂದು. ಬೀದಿ ಬದಿ ವ್ಯಾಪಾರ ಮಾಡುವ ಬಡ ಜನರಿಗೆ 10 ಸಾವಿರ ರು. ಸಾಲ ನೀಡಿ, ಅದನ್ನು ಮರುಪಾವತಿಸಲು 1 ವರ್ಷ ಸಮಯ ನೀಡುವ ಯೋಜನೆ ಇದು. ಆದರೆ ಇಂತಹದ್ದೊಂದು ಯೋಜನೆ ಕರ್ನಾಟಕಕ್ಕೆ ಹಳತು. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಬೀದಿ ಬದಿ ವ್ಯಾಪಾರಿಗಳ ಶೋಷಣೆ ತಪ್ಪಿಸಲು 'ಬಡವರ ಬಂಧು' ಕಿರುಸಾಲ ಯೋಜನೆಯನ್ನು ಜಾರಿಗೊಳಿಸಿದ್ದರು. ಮೀಟರ್ ಬಡ್ಡಿ ದಂಧೆಕೋರರಿಂದ ಸಣ್ಣಪುಟ್ಟ ವ್ಯಾಪಾರಿಗಳನ್ನು ರಕ್ಷಿಸುವ ಉದ್ದೇಶದಿಂದ ಕುಮಾರಸ್ವಾಮಿ ಈ ಮಹತ್ವದ ಯೋಜನೆಯನ್ನು ಅನುಷ್ಠಾನಕ್ಕೆ ತಂದರು. ಬೀದಿಬದಿ ಮತ್ತು ಸಣ್ಣ ವ್ಯಾಪಾರಿಗಳಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ನೀಡುವ ಯೋಜನೆ ಕುಮಾರಸ್ವಾಮಿ ಅವರಿಗೆ ಬಡಪರ ಇರುವ ಕಾಳಜಿಯನ್ನು ತೋರಿಸಿತ್ತು. ಬೀದಿಬದಿ ವ್ಯಾಪಾರಿಗಳಿಗಾಗಿ ಯಾವ ಸರ್ಕಾರವೂ ಮಾಡಿ ತೋರಿಸದ ಕಾರ್ಯವನ್ನು ಕುಮಾರಸ್ವಾಮಿ ಮಾಡಿ ತೋರಿಸಿ ಬೀದಿಬದಿ ವ್ಯಾಪಾರಿಗಳು, ಸಣ್ಣವ್ಯಾಪಾರಿಗಳ ಮನಗೆದ್ದರು. ಬೀದಿ ಬದಿ ವ್ಯಾಪಾರಿಗಳ ಶೋಷಣೆ ತಪ್ಪಿಸಲು ಬಡವರ ಬಂಧು ಕಿರುಸಾಲ ಯೋಜನೆಯನ್ನು 2018ರ ನ.22ರಂದು ಕುಮಾರಸ್ವಾಮಿ ಜಾರಿಗೊಳಿಸಿದರು. ಇದಕ್ಕಾಗಿ ಸುಮಾರು 50 ಕೋಟಿ ರು. ಅನುದಾನ ಇಟ್ಟರು. ಒಂದು ವರ್ಷದ ಆಡಳಿತಾವಧಿ ವೇಳೆಗೆ 18,973 ವ್ಯಾಪಾರಿಗಳಿಗೆ 11.23 ಕೋಟಿ ರು. ಸಾಲ ಸೌಲಭ್ಯವನ್ನು ಒದಗಿಸಿದ್ದರು. ಬೀದಿ ವ್ಯಾಪಾರಿಗಳು ಹೆಚ್ಚಿರುವ ಎಪಿಎಂಸಿ, ತರಕಾರಿ, ಹಣ್ಣು, ಹೂವು ಇತರೆ ಪ್ರದೇಶದಲ್ಲಿ ಮೊಬೈಲ್ ವ್ಯಾನ್ ಮೂಲಕ ಸಾಲವನ್ನು ನೀಡಲಾಗುತ್ತಿತ್ತು. ಈ ಸಾಲವನ್ನು ಡಿಸಿಸಿ, ರಾಜ್ಯದಲ್ಲಿನ ವಿವಿಧ ಸಹಕಾರಿ ಬ್ಯಾಂಕ್‌ಗಳ ಸಹಾಯದ ಮೂಲಕ ಸಾಲ ವಿತರಣೆ ಮಾಡಲಾಗುತ್ತಿತ್ತು. ಯೋಜನೆಯಡಿ 18,973 ವ್ಯಾಪಾರಿಗಳಿಗೆ 11.23 ಕೋಟಿ ರು. ಸಾಲ ಸೌಲಭ್ಯ ಒದಗಿಸಲಾಯಿತು. ಆದರೆ ಈ ಯೋಜನೆಗೆ ನಂತರ ಬಂದ ಸರ್ಕಾರ ಹೆಚ್ಚಿನ ಒತ್ತು ನೀಡಲಿಲ್ಲ. ಕುಮಾರಸ್ವಾಮಿ ಅವರು ಜಾರಿಗೊಳಿಸಿದ್ದ ಯೋಜನೆಯನ್ನೇ ಕೇಂದ್ರ ಸರ್ಕಾರ ಪಿಎಂ– ಸ್ವನಿಧಿ ಹೆಸರಿನಲ್ಲಿ ಜಾರಿಗೆ ತಂದಿದೆ. ಒಟ್ಟಿನಲ್ಲಿ ಬಡವರ ಬಂಧು ಯೋಜನೆ ಮೋದಿ ಅವರ ಕಾರ್ಯಕ್ರಮಕ್ಕೆ ಪ್ರೇರಣೆಯಾಗಿದೆ ಎಂದರೆ ತಪ್ಪಾಗಲಾರದು.

## ಕೊಡಗು ನೆರೆ ಸಂತ್ರಸ್ತರಿಗೆ ಸೂರು ಕೊಟ್ಟ ಎಚ್‌ಡಿಕೆ

### ರಾಜ್ಯದ ಇತಿಹಾಸದಲ್ಲೇ ಪ್ರತಿ ಮನೆಗೆ ₹10 ಲಕ್ಷ ಪರಿಹಾರ



2018ರ ಆಗಸ್ಟ್‌ನಲ್ಲಿ ಕೊಡಗು ಜಿಲ್ಲೆಯಲ್ಲಿ ಕಂಡು ಕೇಳರಿಯದ ಪ್ರಕೃತಿ ವಿಕೋಪ ಸಂಭವಿಸಿತು. ಒಂದು ಕಡೆ ಪ್ರವಾಹ, ಮತ್ತೊಂದು ಕಡೆಯಲ್ಲಿ ಭೂಕುಸಿತ ಸಂಭವಿಸಿ ಅಪಾರ ಸಾವು–ನೋವು ಉಂಟಾಯಿತು. ಈ ಸಂದರ್ಭ ಸತತವಾಗಿ ಕೊಡಗಿಗೆ ಭೇಟಿ ನೀಡಿದ್ದ ಕುಮಾರಸ್ವಾಮಿ, ಕೊಡಗಿನ ಪ್ರಕೃತಿ ವಿಕೋಪ ಸಂಬಂಧ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿ, ನಿರಾಶ್ರಿತರ ಸಮಸ್ಯೆ ಆಲಿಸಿದರು. ಕೊಡಗಿನಲ್ಲಿ ಪ್ರಕೃತಿ ವಿಕೋಪದಿಂದ ಮನೆ ಕಳೆದುಕೊಂಡ ಎಲ್ಲ ನಿರಾಶ್ರಿತರಿಗೆ ಸರ್ಕಾರದಿಂದಲೇ ಹೊಸ ಮನೆ ಕಟ್ಟಿಕೊಟ್ಟು ಹೊಸ ಬದುಕು ಕಲ್ಪಿಸಲಾಗುವುದು ಎಂದರು. ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಪ್ರತಿ ಮನೆಗೂ 10 ಲಕ್ಷ ಪರಿಹಾರ ಘೋಷಿಸಿದರು. ಕುಮಾರಸ್ವಾಮಿ ಅವರಿಂದ ಇಂದು ಕೊಡಗಿನಲ್ಲಿ 800ಕ್ಕೂ ಅಧಿಕ ಸಂತ್ರಸ್ತರ ಕುಟುಂಬಗಳು ಉತ್ತಮ ಮನೆಗಳಲ್ಲಿ ಜೀವನ ಸಾಗಿಸುತ್ತಿವೆ. ಮನೆ– ಆಸ್ತಿ ಕಳೆದುಕೊಂಡ ಸಂತ್ರಸ್ತರಿಗೆ ಅಂದಿನ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಅವರು ಎರಡು ಬೆಡ್‌ರೂಂ ಸಾಮರ್ಥ್ಯವುಳ್ಳ ಸುಂದರ ಮನೆಯನ್ನು ನಿರ್ಮಿಸಲು ಯೋಜನೆ ರೂಪಿಸಿದ್ದರು. ಇದೀಗ 800ಕ್ಕೂ ಹೆಚ್ಚು ಸಂತ್ರಸ್ತರು ಕುಮಾರಸ್ವಾಮಿ ಅವರ ಯೋಜನೆಯ ಮನೆಯಲ್ಲಿ ನೆಲೆ ಕಂಡುಕೊಂಡಿದ್ದಾರೆ.

## ಕರುನಾಡಿನ ಲಕ್ಷಾಂತರ ಅಂಗವಿಕಲರ ಪಾಲಿನ ಅಣ್ಣ

### ಪಕ್ಷದಲ್ಲಿ ಅಂಗವಿಕಲರ ಪ್ರತ್ಯೇಕ ಘಟಕ ಸ್ಥಾಪಿಸಿದ ಮೊದಲಿಗ



ತಮಗೆ ಅಧಿಕಾರವಿರಲಿ ಇಲ್ಲದಿರಲಿ ಸತತವಾಗಿ ಅಂಗವಿಕಲರ ಬಗ್ಗೆ ವಿಶೇಷ ಪ್ರೀತಿ ತೋರುವ ಮೂಲಕ ಸಾವಿರಾರು ಮಂದಿಗೆ ಬದುಕು ಕಟ್ಟಿಕೊಟ್ಟವರು ಎಚ್.ಡಿ. ಕುಮಾರಸ್ವಾಮಿ. ರಾಜ್ಯ ಕಂಡ ಮುಖ್ಯಮಂತ್ರಿಗಳಲ್ಲಿ ಅಂಗವಿಕಲರಿಗೆ ಅತಿ ಹೆಚ್ಚು ಕಾರ್ಯಕ್ರಮ ನೀಡುವ ಜೊತೆಗೆ ವೈಯಕ್ತಿಕವಾಗಿ ಸಾವಿರಾರು ಅಂಗವಿಕಲರಿಗೆ ಉದ್ಯೋಗ, ಹಣಕಾಸು ನೆರವು, ವೈದ್ಯಕೀಯ ವೆಚ್ಚದ ಸಹಾಯ ಮಾಡಿದ್ದಾರೆ. ಅಲ್ಲದೆ, ರಾಜ್ಯದಲ್ಲೇ ಪ್ರಥಮ ಬಾರಿಗೆ ಪಕ್ಷವೊಂದರಲ್ಲಿ ಅಂಗವಿಕಲರ ಘಟಕ ಸ್ಥಾಪಿಸಿದ ಹೆಗ್ಗಳಿಕೆ ಕುಮಾರಸ್ವಾಮಿ ಅವರಿಗೆ ಸಲ್ಲುತ್ತದೆ. ಜೆಡಿಎಸ್ ಅಂಗವಿಕಲರ ಘಟಕದ ಮೂಲಕ ರಾಜ್ಯಾದ್ಯಂತ ಅಂಗವಿಕಲರನ್ನು ಸಂಘಟಿಸಿ ಪರಸ್ಪರ ಸಹಕಾರ ಮಾಡಿಕೊಳ್ಳಲು ಪ್ರೇರೇಪಿಸಿದ್ದಾರೆ. ಕಷ್ಟ ಎಂದು ಬರುವವರಿಗೆ ಸದಾ ಮಿಡಿಯುವ ಕುಮಾರಸ್ವಾಮಿ ಅವರ ಮನೆ, ಕಚೇರಿ, ಹಿಂದೆ ಮುಖ್ಯಮಂತ್ರಿಯಾಗಿದ್ದಾಗಿನ ಸರ್ಕಾರಿ ಕಚೇರಿ ಎದುರು ನಿತ್ಯ ಕಾಯಂ ಜನತಾ ದರ್ಶನ. ಇದರಲ್ಲಿ ಬಹುತೇಕರು ಅಂಗವಿಕಲರು. ಇವರಲ್ಲಿ ನೂರಾರು ಮಂದಿಗೆ ಸ್ಥಳದಲ್ಲೇ ಉದ್ಯೋಗ ಕೊಡಿಸಿದರೆ, ಸಾವಿರಾರು ಮಂದಿಗೆ ಒಂದು ದೂರವಾಣಿ ಕರೆ ಮೂಲಕ ಅಗತ್ಯ ದುಬಾರಿ ಶಸ್ತ್ರಚಿಕಿತ್ಸೆಗಳಿಗೆ ವ್ಯವಸ್ಥೆ ಮಾಡಿದವರು ಎಚ್‌ಡಿಕೆ.

## ಸರ್ಕಾರದಿಂದಲೇ ಪಬ್ಲಿಕ್ ಸ್ಕೂಲ್ ಸ್ಥಾಪನೆ

ಸರ್ಕಾರಿ ಶಾಲೆ ಮತ್ತು ಕಾಲೇಜುಗಳ ಮೂಲಸೌಕರ್ಯ ಅಭಿವೃದ್ಧಿ, ಕರ್ನಾಟಕ ಪಬ್ಲಿಕ್ ಶಾಲೆಗಳ ಪ್ರಾರಂಭ, ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಪ್ರಾರಂಭ ಮಾಡುವ ಮಹತ್ವ ಕ್ರಮಗಳನ್ನು ಕುಮಾರಸ್ವಾಮಿ ಕೈಗೊಂಡರು. ಒಂದು ಸಾವಿರ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ತರಗತಿ ಪ್ರಾರಂಭಿಸುವ ಕುರಿತು ಕ್ರಮ ಜರುಗಿಸಿದರು. 949 ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ವಿಭಾಗ ಪ್ರಾರಂಭಿಸಲಾಯಿತು. ಒಂದೇ ಸೂರಿನಡಿ 1ನೇ ತರಗತಿಯಿಂದ 12ನೇ ತರಗತಿವರೆಗೆ ಗುಣಮಟ್ಟದ ಶಿಕ್ಷಣ ಒದಗಿಸಲು 276 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಿ ಪೂರ್ವ ಪ್ರಾಥಮಿಕ ತರಗತಿ ಪ್ರಾರಂಭಿಸಲಾಯಿತು.

## ಸಾವಿರಾರು ಮಂದಿಗೆ ವೈದ್ಯಕೀಯ ವೆಚ್ಚ ಪಾವತಿ



ಕಿಡ್ನಿ ವೈಫಲ್ಯ, ಹೃದಯ ಕಾಯಿಲೆ ಇರುವವರ ಅಹವಾಲು ಆಲಿಸಿ ಜಯದೇವ ಮತ್ತು ನೆಫ್ರೋ ಯುರಾಲಜಿ ಇನ್‌ಸ್ಟಿಟ್ಯೂಟ್, ಗೊತ್ತಿರುವ ಖಾಸಗಿ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ದೇಶಕರಿಗೆ ದೂರವಾಣಿ ಮೂಲಕ ಮಾತನಾಡಿ ಅಗತ್ಯ ಚಿಕಿತ್ಸೆ ಕೊಡಲು ಕುಮಾರಸ್ವಾಮಿ ಸೂಚಿಸುತ್ತಿದ್ದರು. 2018ರಲ್ಲಿ ಅಂಗವಿಕಲೆ ಸಲೀಮಾ ರಾಮದುರ್ಗ ಅವರಿಗೆ ರಾಮದುರ್ಗ ತಹಸೀಲ್ದಾರ್ ಕಚೇರಿಯಲ್ಲಿ ಕೆಲಸ ಕೊಟ್ಟಿದ್ದರು. 2019ರಲ್ಲಿ ಬಳಿಕ ಬಂದ ಸರ್ಕಾರದ ಅಧಿಕಾರಿಗಳು ಅವರನ್ನು ಕೆಲಸದಿಂದ ತೆಗೆದಾಗ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು.

# ಆಲಮಟ್ಟಿ ಡ್ಯಾಂ ಸಮರ್ಪಣೆ ರೂವಾರಿ

## ಕಲಾಂ ಕರೆಸಿ ಅಣೆಕಟ್ಟೆ ಲೋಕಾರ್ಪಣೆ ಮಾಡಿದ್ದ ಕುಮಾರಸ್ವಾಮಿ





ಕೃಷ್ಣಾ ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಲು 1964ರಲ್ಲಿ ಆಗಿನ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅವರು ಅಡಿಗಲ್ಲು ಹಾಕಿದ್ದರು. ಅದು ವಿಜಯಪುರ ಜಿಲ್ಲೆಯ ಆಲಮಟ್ಟಿಯಲ್ಲಿ. ಈ ಅಣೆಕಟ್ಟು ಹಾಗೂ ಕಾಲುವೆ ಕಾಮಗಾರಿ ಸೇರಿದಂತೆ ನೀರಾವರಿ ಕಾಮಗಾರಿ ಪೂರ್ಣಗೊಂಡಿದ್ದು 2006ರಲ್ಲಿ. ಅಂದು ಮುಖ್ಯಮಂತ್ರಿಯಾಗಿದ್ದವರು ಎಚ್.ಡಿ.ಕುಮಾರಸ್ವಾಮಿ ಅವರು.

ಕಾವೇರಿಗಿದ್ದ ಮಹತ್ವ ಕೃಷ್ಣೆಗೆ ಇಲ್ಲ ಎಂಬ ಕೂಗನ್ನು ಅಳಿಸಿ ಹಾಕಿದವರು ಎಚ್.ಡಿ. ಕುಮಾರಸ್ವಾಮಿ ಅವರು. ಅವರ ವಿಶೇಷ ಆಸಕ್ತಿಯ ಫಲವಾಗಿ 2006ರಲ್ಲಿ ಯುಕೆಪಿಯ ಎ ಸ್ಕಿಂನ ನೀರಾವರಿ ಯೋಜನೆಗಳು ಪೂರ್ಣಗೊಂಡವು. ನೆನೆಗುದಿಗೆ ಬಿದ್ದಿದ್ದ ಹಲವಾರು ಏತ ನೀರಾವರಿ ಯೋಜನೆಗಳು ಕೂಡ ಮುಕ್ತಾಯಗೊಂಡವು. ಯುಕೆಪಿಯ ಲೋಕಾರ್ಪಣೆ ಕಾರ್ಯಕ್ರಮವನ್ನು ನಡೆಸಿದ ಕೀರ್ತಿ ಕುಮಾರಸ್ವಾಮಿ ಅವರಿಗೆ ಸಲ್ಲಬೇಕು.

2006ರ ಆಗಸ್ಟ್ 21ರಂದು ಅಂದಿನ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ (ಈಗ ನಿಧನರಾಗಿದ್ದಾರೆ) ಅವರನ್ನು ಆಲಮಟ್ಟಿಗೆ ಕರೆಯಿಸಿ ಅವರಿಂದ ಜಲಾಶಯ ಹಾಗೂ ಯುಕೆಪಿ ಕಾಮಗಾರಿ ಉದ್ಘಾಟಿಸಿದರು. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಯುಕೆಪಿಯ ಮುಖ್ಯ ಕಾಲುವೆಯ ಕಾಮಗಾರಿಗಳನ್ನು ತುಂಡು ಗುತ್ತಿಗೆ ನೀಡಿ ಕಾಲುವೆ ಕಾಮಗಾರಿ ತ್ವರಿತಗೊಳಿಸಲು ನೆರವಾಗಿದ್ದರು. ತಂದೆಯಂತೆ ಮಗ ಕುಮಾರಸ್ವಾಮಿ ಕೂಡ ಬಾಕಿ ಉಳಿದಿರುವ ಕಾಮಗಾರಿಯನ್ನು ಪೂರ್ಣಗೊಳಿಸಿದರು. ಜಲಾಶಯದ ಜತೆಗೆ ಉದ್ಯಾನವನ ನಿರ್ಮಾಣಕ್ಕೂ ಸಾಕಷ್ಟು ಅನುದಾನ ಬಿಡುಗಡೆಗೊಳಿಸಿದ ಕೀರ್ತಿ ಕುಮಾರಸ್ವಾಮಿ ಅವರಿಗೆ ಸಲ್ಲುತ್ತದೆ. ಸಂತ್ರಸ್ತರಿಗೆ ಸೂರು ಒದಗಿಸುವುದರ ಜತೆಗೆ ಪುನರ್ವಸತಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಿದವರು ಕುಮಾರಸ್ವಾಮಿ. ಇಲ್ಲಿ ಬಂದಾಗಲೆಲ್ಲ ನೇರವಾಗಿ ರೈತರು, ಜನರು, ಸಂತ್ರಸ್ತರೊಂದಿಗೆ ಬೆರೆಯುವ ಅವರ ಸರಳ ವ್ಯಕ್ತಿತ್ವ, ಗ್ರಾಮ ವಾಸ್ತವ್ಯಗಳೆಲ್ಲವೂ ಪ್ರಶಂಸಾರ್ಹ. ಕುಮಾರಸ್ವಾಮಿ ಅವರ ಪರಿಶ್ರಮದ ಫಲವಾಗಿ ಇಂದು ಆಲಮಟ್ಟಿ ವಿಶ್ವಾದ್ಯಂತ ಹೆಸರುವಾಸಿಯಾಗಿದೆ. ಉದ್ಘಾಟನೆಯ ಕಾರ್ಯಕ್ರಮದಲ್ಲಿ ಆಗಿನ ಜಲಸಂಪನ್ಮೂಲ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ಕೂಡ ಹಾಜರಿದ್ದರು.



# ‘ಬೃಹತ್ ಬೆಂಗಳೂರು’ ನಗರಪಾಲಿಕೆ ಸೃಷ್ಟಿಕರ್ತ

ರಾಜಧಾನಿ ಬೆಂಗಳೂರಿಗೆ ಹೊಂದಿಕೊಂಡಿದ್ದರೂ ಮೂಲಸೌಕರ್ಯದಿಂದ ವಂಚಿತಗೊಂಡಿದ್ದ ಹಳ್ಳಿಗಳಿಗೆ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶದಿಂದ ಆ ಗ್ರಾಮಗಳನ್ನು ಬೆಂಗಳೂರು ಮಹಾನಗರಪಾಲಿಕೆಗೆ ಸೇರ್ಪಡೆಗೊಳಿಸಿ ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ’ಯನ್ನಾಗಿಸಿದ ಕೀರ್ತಿ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಸಲ್ಲುತ್ತದೆ.

**7 ನಗರಸಭೆ, 110 ಹಳ್ಳಿ ಬೆಂಗಳೂರು ಪಾಲಿಕೆಗೆ ಸೇರಿದ್ದು ಎಚ್‌ಡಿಕೆ ಅವಧಿಯಲ್ಲೇ**

ಬಿಜೆಪಿ-ಜೆಡಿಎಸ್ ಮೈತ್ರಿ ಸರ್ಕಾರದ ಅವಧಿಯಲ್ಲಿ ಬೆಂಗಳೂರನ್ನು ವಿಸ್ತರಿಸಿ ಮೂಲಸೌಕರ್ಯ ಕಲ್ಪಿಸುವ ಕಾರ್ಯವನ್ನು ಮಾಡಿ ಜನರ ಜೀವನವನ್ನು ಉತ್ತಮಗೊಳಿಸಿದರು. 2007ಕ್ಕೂ ಮುನ್ನ ಬೆಂಗಳೂರು ಮಹಾನಗರ ಪಾಲಿಕೆ ಇದ್ದ ಸಂದರ್ಭದಲ್ಲಿ ನಗರದಲ್ಲಿ 100 ವಾರ್ಡ್‌ಗಳಿದ್ದವು. 2007ರಲ್ಲಿ ಏಳು ನಗರಸಭೆಗಳು, 1 ಪಟ್ಟಣ ಪಂಚಾಯತ್ ಮತ್ತು 110 ಹಳ್ಳಿಗಳನ್ನು ಸೇರಿಸಿ ಬಿಬಿಎಂಪಿ ರಚನೆ ಮಾಡಿದರು. ತರುವಾಯ 100 ವಾರ್ಡ್‌ಗಳು ಪುನರ್ ರಚನೆಗೊಂಡು 198 ವಾರ್ಡ್‌ಗಳಾದವು. ನರ್ಮ್ ಯೋಜನೆಯಡಿ ಬಂದ 11 ಸಾವಿರ ಕೋಟಿ ರು. ಅನ್ನು ಸದ್ಬಳಕೆ ಮಾಡಿಕೊಂಡ ಕುಮಾರಸ್ವಾಮಿ, ಬಿಬಿಎಂಪಿಗೆ ಸೇರ್ಪಡೆಗೊಂಡ ಹಳ್ಳಿಗಳಿಗೆ ಹೊಸ ಸ್ವರೂಪ ನೀಡಿದರು.

ಬಿಬಿಎಂಪಿ ರಚನೆಗೂ ಮುನ್ನ ಬೆಂಗಳೂರಿಗೆ ಹೊಂದಿಕೊಂಡಿದ್ದರೂ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಾಂಡವವಾಡುತ್ತಿತ್ತು. ಬೋರ್‌ವೆಲ್ ನೀರನ್ನೇ ಜನರು ಕುಡಿಯಲು ನಂಬಿಕೊಂಡಿದ್ದರು. ಮೂಲಸೌಕರ್ಯದಿಂದ ಹಳ್ಳಿಗಳು ವಂಚಿತವಾಗಿದ್ದವು. ರಸ್ತೆಗಳೆಲ್ಲಾ ತಿಪ್ಪೆಗುಂಡಿಗಳಾಗಿದ್ದವು. ಇದಕ್ಕೆಲ್ಲಾ ಇತಿಶ್ರೀ ಹಾಡಿದ್ದು ಕುಮಾರಸ್ವಾಮಿ. ಅವರು ಕೈಗೊಂಡ ದಿಟ್ಟ ಕ್ರಮದಿಂದಾಗಿ ಇವತ್ತು ಅಭಿವೃದ್ಧಿಯಾಗಿದೆ. ಈ ಮೊದಲು ಕೇವಲ 240 ಚ.ಕಿ.ಮೀ. ಇದ್ದ ಬೆಂಗಳೂರು, ಬಿಬಿಎಂಪಿ ರಚನೆ ಬಳಿಕ 804 ಚ.ಕಿ.ಮೀ.ಆಗಿದೆ.

# ಬೆಂಗಳೂರಿಗೆ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಕನಸು

ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಪೆರಿಫೆರಲ್ ರಿಂಗ್ ರಸ್ತೆ ಯೋಜನೆಗೆ ಬಿಜೆಪಿ-ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಪ್ರಸ್ತಾವನೆ ಸಿದ್ಧಪಡಿಸಲಾಯಿತು. ದಶಕ ಕಳೆದರೂ ಯೋಜನೆ ಮಾತ್ರ ಯಾವುದೇ ವೇಗವನ್ನು ಕಂಡುಕೊಳ್ಳದಿರುವುದು ಕುಮಾರಸ್ವಾಮಿ ಅವರಿಗೆ ಬೇಸರ ತಂದಿದೆ.  ಬಿಜೆಪಿ-ಜೆಡಿಎಸ್ ಮೈತ್ರಿ ಸರ್ಕಾರದ ಅವಧಿಯಲ್ಲಿ ಯೋಜನೆ ರೂಪಿಸಿ 3,800 ಕೋಟಿ ರು. ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ, ಪ್ರಸ್ತಾವನೆಗೆ ಒಪ್ಪಿಗೆ ಸಿಕ್ಕಿರಲಿಲ್ಲ. 12 ವರ್ಷಗಳ ಬಳಿಕ ಕಾಂಗ್ರೆಸ್-ಜೆಡಿಎಸ್ ಸರ್ಕಾರದ ಅವಧಿಯಲ್ಲಿ ಕುಮಾರಸ್ವಾಮಿ ಯೋಜನೆಗೆ ಮರು ಜೀವನೀಡಿದರು. ಯೋಜನೆಗೆ 17 ಸಾವಿರ ಕೋಟಿ ರು. ವೆಚ್ಚ ಮಾಡಲು ತೀರ್ಮಾನಿಸಲಾಗಿದ್ದು, 75 ಮೀಟರ್ ಅಗಲದ ರಸ್ತೆ ನಿರ್ಮಿಸಲು ಉದ್ದೇಶಿಸಲಾಗಿತ್ತು. 1910 ಎಕರೆ ಜಮೀನನ್ನು ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳಬೇಕಾಗಿತ್ತು. ಆದರೆ, ಕುಮಾರಸ್ವಾಮಿ ಹೊರತುಪಡಿಸಿದರೆ ಬೇರಾರೂ ಸ್ವಾಧೀನ ಪ್ರಕ್ರಿಯೆಗೆ ಮುಂದಾಗಲಿಲ್ಲ.




# ಮನಮೋಹನ್ ಆಹ್ವಾನಿಸಿ ಮೆಟ್ರೋಗೆ ಅಡಿಗಲ್ಲು

ಬೆಂಗಳೂರಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದ್ದಂತೆ ಸಂಚಾರ ದಟ್ಟಣೆಯು ದುಪ್ಪಟ್ಟಾಗಲಾರಂಭಿಸಿತು. ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳುವ ಪ್ರಯತ್ನ ನಡೆಯುತ್ತಿರುವಾಗಲೇ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್-ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಪ್ರಧಾನಿ ಮನಮೋಹನ ಸಿಂಗ್ ಮೆಟ್ರೋ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದರು. ಮೆಟ್ರೋ ಯೋಜನೆಯ ಕನಸು 90ರ ದಶಕದಲ್ಲಿ ಹುಟ್ಟಿಕೊಂಡರೂ 2002ರಲ್ಲಿ ಸಮಗ್ರ ಯೋಜನಾ ವರದಿ ಸಿದ್ಧಗೊಂಡಿತು. ಕುಮಾರಸ್ವಾಮಿ ಮುಖ್ಯಮಂತ್ರಿಯಾದ ಬಳಿಕ 2006ರಲ್ಲಿ ಸರ್ಕಾರವು ಒಪ್ಪಿಗೆ ನೀಡಿತು. ಜೆಡಿಎಸ್-ಕಾಂಗ್ರೆಸ್ ಆಡಳಿತಾವಧಿಯಲ್ಲಿ ಬೆಂಗಳೂರು ಮೆಟ್ರೋ ರೈಲು ನಿಗಮವು 105.55 ಕಿ.ಮೀ.ಗಳಷ್ಟು ಹೊಸ ಮಾರ್ಗಗಳ ಪೂರ್ವ ಕಾರ್ಯಸಾಧ್ಯತೆಯ ಅಧ್ಯಯನಗಳನ್ನು ನಡೆಸುವ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡಿತು. ಮೆಟ್ರೋ ರೈಲು ಯೋಜನೆ ಹಂತ-2ರಲ್ಲಿ 26,405.14 ಕೋಟಿ ರು. ವೆಚ್ಚದಲ್ಲಿ 72.005 ಕಿ.ಮೀ.ಮಾರ್ಗದ ಕಾಮಗಾರಿಯನ್ನು ಪ್ರಾರಂಭಿಸಲಾಯಿತು. ಉತ್ತರ- ದಕ್ಷಿಣ ಕಾರಿಡಾರ್‌ನಲ್ಲಿ 6 ಬೋಗಿಗಳ ರೈಲು ಸೇವೆ ಪ್ರಾರಂಭಿಸಲಾಯಿತು.







# ಮಹದಾಯಿ ಹೋರಾಟಗಾರರ ಬೆನ್ನಿಗೆ ನಿಂತ ಕುಮಾರಸ್ವಾಮಿ

## ರೈತರನ್ನು ಬಂಧಿಸಲು ಬಂದಿದ್ದ ಪೊಲೀಸರಿಗೆ ಜಾಗ ಖಾಲಿ ಮಾಡಲು ತಾಕೀತು ಮಾಡಿದ್ದರು

ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ರೈತರ ನೋವಿಗೆ ಸ್ಪಂದಿಸುವ ಮತ್ತು ರೈತರ ಏಳ್ಗೆಗಾಗಿ ಹೋರಾಟ ಮಾಡುವಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ಎಂಥದ್ದೇ ಪರಿಸ್ಥಿತಿ ಇರಲಿ ಹಿಂದೆ-ಮುಂದೆ ನೋಡದೆ ಮುನ್ನುಗ್ಗುತ್ತಾರೆ. ನಿಮ್ಮೊಂದಿಗೆ ನಾನಿದ್ದೇನೆ ಎಂದು ಬೆನ್ನಿಗೆ ನಿಂತು ಧೈರ್ಯ ತುಂಬುತ್ತಾರೆ. ಅವರ ಕಂಬನಿ ಒರೆಸುತ್ತಾರೆ. ಅವರೊಬ್ಬ ಮಾನವೀಯ ಕಳಕಳಿಯ ಮಹಾನಾಯಕ.

2017ರಲ್ಲಿ ಧಾರವಾಡ ಜಿಲ್ಲೆ ನವಲಗುಂದ, ಯಮನೂರು ಮತ್ತು ಆರೇಕುರಹಟ್ಟಿ, ಅಳಗವಾಡಿ ರೈತರು ‘ಮಹದಾಯಿ ಯೋಜನೆ’ಗೆ ಆಗ್ರಹಿಸಿ ಪ್ರತಿಭಟನೆಗೆ ಇಳಿದಿದ್ದರು. ವಿವಿಧ ಕಾರಣಗಳಿಂದಾಗಿ ಹೋರಾಟ ಹಿಂಸೆಗೆ ತಿರುಗಿತ್ತು. ಕೆಲವು ಕಿಡಿಗೇಡಿಗಳು ಸರ್ಕಾರಿ ಕಚೇರಿ, ಬಸ್ಸು, ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿ ಹಾನಿಯುಂಟು ಮಾಡಿದ್ದರು. ಇದನ್ನೇ ನೆಪವಾಗಿಟ್ಟುಕೊಂಡು ಅಂದಿನ ರಾಜ್ಯ ಸರ್ಕಾರ ಇಡೀ ಹೋರಾಟವನ್ನು ಹತ್ತಿಕ್ಕಲು ಹೋರಾಟಗಾರರನ್ನು ಹೆಡಮುರಿಕಟ್ಟಿ ಸಾಲು ಸಾಲಾಗಿ ಜೈಲಿಗೆ ತಳ್ಳುತ್ತಿತ್ತು. ಈ ಬಂಧನ ಕಾರ್ಯಾಚರಣೆಗೆ ಅಡ್ಡಿಯಾದವರ ಮೇಲೂ ಪೊಲೀಸರು ಲಾಠಿ ಪ್ರಯೋಗ ಮಾಡುತ್ತಿದ್ದರು. ಯಮನೂರು ಗ್ರಾಮದಲ್ಲಿನ ನೂರಾರು ಮಹಿಳೆಯರನ್ನು ಪೊಲೀಸರು ಥಳಿಸಿದ್ದರು. ವೃದ್ಧೆಯರು, ಬಸುರಿಯರು, ಬಾಣಂತಿಯರ ಮೈಮೇಲೆ ಬಾಸುಂಡೆಗಳು ಎದ್ದಿದ್ದವು. ಅಷ್ಟು ಅಮಾನವೀಯವಾಗಿ ವರ್ತಿಸಿದ್ದರು ಪೊಲೀಸರು. ಇದು ರಾಷ್ಟ್ರೀಯ ಸುದ್ದಿಯಾಗಿತ್ತು.

ಈ ಪೊಲೀಸ್ ದೌರ್ಜನ್ಯ ಸಂಗತಿ ಕೇಳಿ ಮಮ್ಮಲ ಮರುಗಿದ ಕುಮಾರಸ್ವಾಮಿ ತಕ್ಷಣ ಮಹದಾಯಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಹೋರಾಟಗಾರರ ರಕ್ಷಣೆಗೆ ನಿಂತರು. ಹಿಂಸಾಚಾರ ನೆಪದಿಂದ ಪಟ್ಟಣ, ಹಳ್ಳಿಗಳಲ್ಲಿ ಬೀಡುಬಿಟ್ಟಿದ್ದ ಪೊಲೀಸರಿಗೆ ಅಲ್ಲಿಂದ ಜಾಗ ಖಾಲಿ ಮಾಡುವಂತೆ ತಾಕೀತು ಮಾಡಿದರು. ಜಗತ್ತಿಗೆ ಅನ್ನ ನೀಡುವ ರೈತರು ಯಾವುದೇ ಕಾರಣಕ್ಕೂ ಹಿಂಸೆಗೆ ಇಳಿಯುವುದಿಲ್ಲ. ಆದರೆ ಅವರ ನಾಲ್ಕಾರು ವರ್ಷಗಳ ಮಹದಾಯಿ ಹೋರಾಟವನ್ನು ಪೊಲೀಸರು ಅಣಕಿಸುವಂತೆ ವರ್ತಿಸಿದ್ದೇ ಹೋರಾಟಗಾರರು ತಿರುಗಿ ಬೀಳುವಂತೆ ಮಾಡಿದೆ ಎಂದು ಪ್ರತಿಪಾದಿಸಿ ಹಿಂಸೆಯ ಆರೋಪದಿಂದ ರೈತರನ್ನು ಪಾರು ಮಾಡಿದರು.

ಅದಾಗಲೇ 180 ಜನ ಹೋರಾಟಗಾರರನ್ನು ಬಂಧಿಸಿ ಬಳ್ಳಾರಿ ಜೈಲಿಗೆ ಕಳುಹಿಸಿದ್ದ ಪೊಲೀಸರು ಕುಮಾರಸ್ವಾಮಿ ಮಧ್ಯಪ್ರವೇಶದಿಂದಾಗಿ ರೈತರನ್ನು ಮತ್ತೆ ಮುಟ್ಟುವ ಧೈರ್ಯ ಮಾಡಲಿಲ್ಲ. ಹಾಗಾಗಿ ಉಗ್ರ ಹೋರಾಟದಲ್ಲಿ ಭಾಗಿಯಾಗಿದ್ದ ಹಲವು ರೈತರು ನಿರಾಳರಾದರು. ಅಲ್ಲದೇ ಅದಾಗಲೇ ಜೈಲು ಸೇರಿದ್ದ ಹೋರಾಟಗಾರರನ್ನೂ ಸರ್ಕಾರ ಚಕಾರವೆತ್ತದೇ ಬಿಡುಗಡೆ ಮಾಡಿಸಿತು.

ಕೆಲವೇ ದಿನಗಳಲ್ಲಿ ಸ್ಥಳಕ್ಕೆ ಬಂದು ನೊಂದ ರೈತರು ಮತ್ತು ರೈತ ಮಹಿಳೆಯರಿಗೆ ಸಾಂತ್ವನ ಹೇಳಿದರು. ಕುಮಾರಸ್ವಾಮಿ ಅವರ ಬೆಂಬಲ ಹೋರಾಟಗಾರರಿಗೆ ಆನೆಬಲ ತಂದಿತು.

### ಕಳಸಾ- ಬಂಡೂರಿ ಅನುಷ್ಠಾನಕ್ಕೂ ಯತ್ನ

ಮಾಜಿ ಸಿಎಂ ಕುಮಾರಸ್ವಾಮಿ ಅವರು ಕೇವಲ ಗಡಿ ವಿಷಯದಲ್ಲಿ ಅಷ್ಟೇ ಅಲ್ಲದೆ ನೀರಾವರಿ ಯೋಜನೆಗೂ ಹೆಚ್ಚಿನ ಆಸಕ್ತಿ ತೋರಿದ್ದರು. ಉತ್ತರ ಕರ್ನಾಟಕ, ಬೆಳಗಾವಿ, ಗದಗ, ಧಾರವಾಡ, ನವಲಗುಂದ, ನರಗುಂದ ಸೇರಿದಂತೆ ಹಲವು ನಗರ, ಪಟ್ಟಣ ಸೇರಿದಂತೆ ಇನ್ನಿತರ ಗ್ರಾಮಗಳಿಗೆ ಕುಡಿಯುವ ನೀರು ಹಾಗೂ ಕೃಷಿ ಚಟುವಟಿಕೆಗಾಗಿ ಕಳಸಾ- ಬಂಡೂರಿ ಹಾಗೂ ಮಹದಾಯಿ ನೀರನ್ನು ರಾಜ್ಯಕ್ಕೆ ತರಲು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದರು. ಅಲ್ಲದೆ ವಿವಾದಿತ ಸ್ಥಳಕ್ಕೂ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಜತೆಗೆ ಅಂದಿನ ಸಮ್ಮಿಶ್ರ ಸರ್ಕಾರದ ನೀರಾವರಿ ಸಚಿವರಾಗಿದ್ದ ಕೆ.ಎಸ್.ಈಶ್ವರಪ್ಪ ಅವರಿಗೂ ಮಹದಾಯಿ, ಕಳಸಾ- ಬಂಡೂರಿ ನೀರನ್ನು ರಾಜ್ಯಕ್ಕೆ ಹರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದ್ದರು. ಇದರಿಂದಾಗಿ ಹಲವು ದಶಕಗಳಿಂದ ನಡೆದುಕೊಂಡು ಬಂದ ಹೋರಾಟಕ್ಕೆ ಮತ್ತಷ್ಟು ಬಲ ಬಂದಿತ್ತು.




### ಸಂತ್ರಸ್ತರ ಬಳಿ ತೆರಳಿ ಕಷ್ಟ ಆಲಿಕೆ

2006ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಭೀಕರ ಪ್ರವಾಹ ಎದುರಾಗಿದ್ದರಿಂದ ಅಥಣಿ, ಕಾಗವಾಡ, ಚಿಕ್ಕೋಡಿ, ರಾಯಬಾಗ ಸೇರಿದಂತೆ ಇನ್ನಿತರ ತಾಲೂಕಿನ ನೂರಾರು ಗ್ರಾಮಗಳು ಜಲಾವೃತವಾಗಿದ್ದವು. ಇದರಿಂದಾಗಿ ಸಾವಿರಾರು ಕುಟುಂಬಗಳು ಮನೆ, ದನಕರುಗಳನ್ನು ಕಳೆದುಕೊಂಡು ಬೀದಿಗೆ ಬಿದ್ದಿದ್ದವು. ಈ ವೇಳೆ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಅವರು, ಜನರ ಹಾಗೂ ಸಂತ್ರಸ್ತರ ಕಷ್ಟಗಳನ್ನು ಹತ್ತಿರದಿಂದ ಅರಿತುಕೊಳ್ಳುವ ಉದ್ದೇಶದಿಂದ ವೀಕ್ಷಣೆಗೆ ಆಗಮಿಸಿದ್ದರು. ಈ ವೇಳೆ ಅಥಣಿ ತಾಲೂಕಿನಲ್ಲಿ ಸಂತ್ರಸ್ತರೊಂದಿಗೆ ಗ್ರಾಮವಾಸ್ತವ್ಯ ಮಾಡುವ ಮೂಲಕ ಜನಮೆಚ್ಚುಗೆ ಗಳಿಸಿದರು.



ಕನ್ನಡಪ್ರಭ
ಬುಧವಾರ
16.12.2020



## ಕುಮಾರಸ್ವಾಮಿ ಐತಿಹಾಸಿಕ, ಕ್ರಾಂತಿಕಾರಕ ನಿರ್ಧಾರ

# ಸಾರಾಯಿ, ಲಾಟರಿ ನಿಷೇಧ

### ವಿರೋಧ ಲೆಕ್ಕಿಸದೆ ನಿಷೇಧಿಸಿ ಲಕ್ಷಾಂತರ ಕುಟುಂಬಗಳಲ್ಲಿ ನೆಮ್ಮದಿಯ ಭಾವ ಮೂಡಿಸಿದ ಕುಮಾರಣ್ಣ

ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿದ್ದ ಹಾಗೂ ಬಡಜನರನ್ನು ಬೀದಿಗೆ ದೂಡುತ್ತಿದ್ದ ಸಾರಾಯಿ ಮತ್ತು ಲಾಟರಿಯನ್ನು ರಾಜ್ಯದಲ್ಲಿ ನಿಷೇಧಿಸುವ ಮೂಲಕ ಐತಿಹಾಸಿಕ ತೀರ್ಮಾನ ಕೈಗೊಂಡ ಕೀರ್ತಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಸಲ್ಲುತ್ತದೆ. ಈ ಮೂಲಕ ನಾಡಿನ ಲಕ್ಷಾಂತರ ಜನರ ನೆಮ್ಮದಿಗೆ ಅವರು ಕಾರಣಕರ್ತರಾಗಿದ್ದಾರೆ.

ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ವೇಳೆ ಎಚ್.ಡಿ. ಕುಮಾರಸ್ವಾಮಿ 2007ರಲ್ಲಿ ಸಾರಾಯಿ ಮಾರಾಟವನ್ನು ನಿಷೇಧಿಸಿ ಮಹತ್ವದ ತೀರ್ಮಾನ ಕೈಗೊಂಡರು. ಮದ್ಯದಂತೆ ಸಾರಾಯಿಯು ಸರ್ಕಾರಕ್ಕೆ ಬಹುದೊಡ್ಡ ಆದಾಯ ತರುತ್ತಿತ್ತು. ಆದರೂ ಕುಮಾರಸ್ವಾಮಿ ಅವರು ಬಡ ಕುಟುಂಬಗಳ ಹಿತದೃಷ್ಟಿಯಿಂದ ಸಾರಾಯಿ ಮಾರಾಟವನ್ನು ನಿಷೇಧಿಸುವ ದಿಟ್ಟ ಹೆಜ್ಜೆ ಇಟ್ಟಿದ್ದರು. ಸಾಕಷ್ಟು ವಿರೋಧ ವ್ಯಕ್ತವಾದರೂ ಅದನ್ನು ಲೆಕ್ಕಿಸದೆ ಸಾರಾಯಿ ಮಾರಾಟವನ್ನು ನಿರ್ಬಂಧಿಸಿದರು. ಕುಮಾರಸ್ವಾಮಿ ಅವರ ತೀರ್ಮಾನಕ್ಕೆ ಸರ್ಕಾರದ ಭಾಗವಾಗಿದ್ದ ಬಿಜೆಪಿಯು ಸಹ ಸಾಥ್ ನೀಡಿತು. ಜೆಡಿಎಸ್-ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೈಗೊಂಡ ಸಾರಾಯಿ ನಿಷೇಧ ತೀರ್ಮಾನದಿಂದ ಲಕ್ಷಾಂತರ ಬಡ ಕುಟುಂಬಗಳು ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು.

2005ರಲ್ಲಿ ಯುಗಾದಿ ಹಬ್ಬದ ಮರುದಿನ ನೆಲಮಂಗಲ ತಾಲೂಕಿನಲ್ಲಿ ಕಳ್ಳಭಟ್ಟಿ ಸೇವನೆ ಮಾಡಿ 20ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದರು. ಈ ಘಟನೆಯು ಕುಮಾರಸ್ವಾಮಿ ಅವರಿಗೆ ತೀವ್ರ ನೋವುಂಟು ಮಾಡಿತ್ತು. ಮುಖ್ಯಮಂತ್ರಿಯಾದ ಬಳಿಕ ಬಡವರನ್ನು ಬೀದಿಗೆ ತಳ್ಳುವ ಸಾರಾಯಿ ಮಾರಾಟವನ್ನು ನಿಷೇಧಿಸುವ ಕ್ರಮ ಕೈಗೊಂಡರು. ಸಾರಾಯಿಗಾಗಿ ದುಡಿಮೆಯ ಅರ್ಧಭಾಗವನ್ನು ಬಡಕುಟುಂಬದ ಹಲವು ಜನರು ಖರ್ಚು ಮಾಡುತ್ತಿದ್ದರು. ಇದಕ್ಕೆ ಕಡಿವಾಣ ಹಾಕಿದ್ದೇ ಸಾರಾಯಿ ಮಾರಾಟ ನಿಷೇಧ. ಈ ಕ್ರಮದಿಂದ ಸರ್ಕಾರಕ್ಕೆ ಬರುತ್ತಿದ್ದ ದೊಡ್ಡ ಆದಾಯಕ್ಕೂ ಪೆಟ್ಟುಬಿತ್ತು. ಆದರೂ ಸಾರಾಯಿ ನಿಷೇಧ ಮಾಡಿದ ಕ್ರಮವನ್ನು ರಾಜ್ಯದ ಜನತೆ ಸ್ವಾಗತಿಸಿದರು. ಇನ್ನು, ಸಾರಾಯಿ ಮಾರಾಟ ನಿಷೇಧದಂತೆ ಕುಮಾರಸ್ವಾಮಿ ತೆಗೆದುಕೊಂಡ ಮತ್ತೊಂದು ಮಹತ್ವ ತೀರ್ಮಾನವೇ ಲಾಟರಿ ನಿಷೇಧ. ಎಲ್ಲ ರೀತಿಯ ಲಾಟರಿ ಮಾರಾಟಕ್ಕೆ ರಾಜ್ಯದಲ್ಲಿ ನಿರ್ಬಂಧ ಹೇರಲಾಯಿತು. ರಾಜ್ಯದಲ್ಲಿ ಲಾಟರಿ ನಿಷೇಧ ಆಗಿದ್ದು ಸಹ 2007ರಲ್ಲಿ. ಸಾಮಾಜಿಕ ಪಿಡುಗಾಗಿ ಲಾಟರಿ ವ್ಯವಸ್ಥೆಯು ಸಮಾಜದ ಸ್ವಾಸ್ಥ್ಯ ಹಾಳು ಮಾಡಿತ್ತು. ಸಾರಾಯಿಯಂತೆ ಲಾಟರಿಯಿಂದಲೂ ಹಲವು ಕುಟುಂಬಗಳು ಸಂಕಷ್ಟಕ್ಕೊಳಗಾಗಿದ್ದವು. ಇದನ್ನು ಮನಗಂಡ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ವೇಳೆ ಎಲ್ಲಾ ರೀತಿಯ ಲಾಟರಿಗಳನ್ನು ನಿಷೇಧಿಸಿ ಆದೇಶ ಹೊರಡಿಸಿದ್ದರು. ಎಂಎಸ್ಐಎಲ್ ಮೂಲಕ ನಡೆಸುತ್ತಿದ್ದ ಲಾಟರಿ ಮಾರಾಟವನ್ನು ರದ್ದು ಮಾಡಲಾಯಿತು. 15 ಲಕ್ಷಕ್ಕೂ ಹೆಚ್ಚು ಕುಟುಂಬಗಳು ಲಾಟರಿ ಮೂಲಕ ಜೀವನ ಕಂಡುಕೊಂಡಿದ್ದರಿಂದ ಲಾಟರಿ ನಿಷೇಧವನ್ನು ಹಿಂಪಡೆಯಬೇಕು ಎಂಬ ಆಗ್ರಹಗಳು ಕೇಳಿಬಂದರೂ ಕುಮಾರಸ್ವಾಮಿ ಅದಕ್ಕೆ ಸೊಪ್ಪು ಹಾಕದೆ ಲಾಟರಿ ನಿಷೇಧಿಸುವ ದಿಟ್ಟ ತೀರ್ಮಾನ ಕೈಗೊಂಡರು.

# ಮೈತ್ರಿ ನೋವು ನುಂಗಿದ ವಿಷಕಂಠ

### ದೋಸ್ತಿ ಸರ್ಕಾರದಲ್ಲಿ ಹಲವು ಎಡರು- ತೊಡರು ಮಧ್ಯೆ ಉತ್ತಮ ಆಡಳಿತಕ್ಕೆ ಯತ್ನ



ಹಿಂದಿನ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ ವಿಷಕಂಠನಾಗಿ ಎಲ್ಲಾ ನೋವುಗಳನ್ನು ಉಂಡು 14 ತಿಂಗಳ ಅಲ್ಪಾವಧಿಯಲ್ಲಿಯೂ ರಾಜ್ಯಕ್ಕೆ ಉತ್ತಮ ಆಡಳಿತ ನೀಡುವ ಪ್ರಯತ್ನ ಮಾಡಿದರು.

ಮಿತ್ರಪಕ್ಷದಿಂದಲೇ ಸಾಕಷ್ಟು ವಿರೋಧ ವ್ಯಕ್ತವಾದರೂ, ಆರ್ಥಿಕ ಹೊರೆ ಎಂಬ ಮಾತು ವಿತ್ತ ಇಲಾಖೆಯಿಂದ ಬಂದರೂ ಅದನ್ನು ಲೆಕ್ಕಿಸದೆ ರೈತರಿಗಾಗಿ ಮಹತ್ವಾಕಾಂಕ್ಷಿ ಸಾಲಮನ್ನಾ ಯೋಜನೆಯನ್ನು ಪ್ರಕಟಿಸಿದರು. ಅನ್ನಭಾಗ್ಯ ಯೋಜನೆ ಮುಂದುವರೆಸಿದರು. ಕಾಂಗ್ರೆಸ್‌ನ ಹಲವು ಶಾಸಕರು ನೀಡುತ್ತಿದ್ದ ಮಾನಸಿಕ ಕಿರುಕುಳವನ್ನು ಸಹಿಸಿಕೊಂಡು ರಾಜ್ಯದ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವಲ್ಲಿ ಕುಮಾರಸ್ವಾಮಿ ತಮ್ಮನ್ನು ತಾವು ತೊಡಗಿಸಿಕೊಂಡರು.

ಮುಖ್ಯಮಂತ್ರಿಯಾಗಿ ಜೆಡಿಎಸ್ ಕಚೇರಿಗೆ ಭೇಟಿ ನೀಡಿದ ವೇಳೆ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಕಣ್ಣೀರು ಹಾಕಿ ತಮ್ಮ ಅಂತರಾಳದ ನೋವನ್ನು ಹಂಚಿಕೊಂಡಿದ್ದರು. ನಾನು ರಾಜ್ಯದ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಯಾಗಿರುವುದಕ್ಕೆ ನಿಮಗೆ (ಕಾರ್ಯಕರ್ತರಿಗೆ) ಸಂತೋಷವಾಗಿದೆ. ಆದರೆ, ನಾನು ಸಂತೋಷದಲ್ಲಿಲ್ಲ. ನೋವಿನ ವಿಷ ನುಂಗಿ ವಿಷಕಂಠನಾಗಿದ್ದು, ನಿಮಗೆ ಅಮೃತ ನೀಡುವ ಪ್ರಯತ್ನ ಪಡುತ್ತಿದ್ದೇನೆ ಎಂದು ಭಾವುಕರಾಗಿದ್ದರು.








ಹುಟ್ಟುಹಬ್ಬದ ಶುಭಾಶಯಗಳು
ಮಾಜಿ ಮುಖ್ಯಮಂತ್ರಿಗಳು,
ಕರುನಾಡ ಕರುಣಾಮಯಿ
ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿರವರ
61ನೇ ಹುಟ್ಟುಹಬ್ಬದ ಶುಭಾಶಯಗಳು
ಮಾಜಿ ಸಚಿವರು, ಹಾಲಿ ಶಾಸಕರು,
ಕ್ಷೀರ ಕ್ರಾಂತಿಯ ಹರಿಕಾರ
ಸನ್ಮಾನ್ಯ ಶ್ರೀ ಹೆಚ್.ಡಿ.ರೇವಣ್ಣರವರ
63ನೇ ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು
ಶ್ರೀ ಟಿ. ತಿಮ್ಮೇಗೌಡ
ಬಿಬಿಎಂಪಿ ಮಾಜಿ ಸದಸ್ಯರು,
ಮಾಲೀಕರು, ಮೇ॥ ಮೇಘ ಟ್ರಾವಲ್ಸ್,
ವಿಜಯ ಆಟೋ ಸರ್ವೀಸ್ ಹಾಗೂ
ಅಧ್ಯಕ್ಷರು, ಶ್ರೀ ತಿಮ್ಮಯ್ಯ ಚಾರಿಟಬಲ್ ಟ್ರಸ್ಟ್,
527, 2ನೇ ಮುಖ್ಯರಸ್ತೆ, ಶ್ರೀನಗರ,
ಬೆಂಗಳೂರು-50


ಕರುನಾಡಿನ ಸುಪುತ್ರ ಗ್ರಾಮ ವಾಸ್ತವ್ಯದ ರೂವಾರಿ
ಮಾಜಿ ಮುಖ್ಯಮಂತ್ರಿಗಳಾದ
ಶ್ರೀ ಎಚ್.ಡಿ.ಕುಮಾರಸ್ವಾಮಿ ಹಾಗೂ
ಮಾಜಿ ಲೋಕೋಪಯೋಗಿ ಸಚಿವರು ಹಾಗೂ
ಅಭಿವೃದ್ಧಿಯ ಹರಿಕಾರ ಮತ್ತು ಶಾಸಕರಾದ
ಶ್ರೀ ಎಚ್.ಡಿ.ರೇವಣ್ಣ ಅವರಿಗೂ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು
ಶ್ರೀ ಭದ್ರೇಗೌಡ ಬಿ.
ಮಾಜಿ ಉಪ ಮಹಾಪೌರರು, ಬಿಬಿಎಂಪಿ ಹಾಗೂ
ಸದಸ್ಯರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
ಬಿಬಿಎಂಪಿ


ಮಾಜಿ ಮುಖ್ಯಮಂತ್ರಿಗಳು,
ಕರುನಾಡ ಕರುಣಾಮಯಿ
ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿರವರಿಗೆ
ಮಾಜಿ ಸಚಿವರು, ಹಾಲಿ ಶಾಸಕರು,
ಕ್ಷೀರ ಕ್ರಾಂತಿಯ ಹರಿಕಾರ
ಸನ್ಮಾನ್ಯ ಶ್ರೀ ಹೆಚ್.ಡಿ.ರೇವಣ್ಣರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು
ಶ್ರೀ ಹೆಚ್.ಎಂ.ರಮೇಶ್ ಗೌಡ
ವಿಧಾನ ಪರಿಸಷತ್ ಸದಸ್ಯರು,
ಬೆಂಗಳೂರು.


ಹುಟ್ಟುಹಬ್ಬದ ಶುಭಾಶಯಗಳು
ಅಭಿವೃದ್ಧಿ ಹರಿಕಾರ, ದೀನ ದಲಿತರ ಬಂಧು,
ರೈತಪರ ಹೋರಾಟಗಾರ,
ಕರ್ನಾಟಕ ರಾಜ್ಯದ ಜನಮೆಚ್ಚಿದ
ಮಾಜಿ ಮುಖ್ಯಮಂತ್ರಿಗಳಾದ
ಶ್ರೀ ಹೆಚ್.ಡಿ.ಕುಮಾರಸ್ವಾಮಿ
ಅವರಿಗೆ
ಹುಟ್ಟುಹಬ್ಬದ
ಶುಭಾಶಯಗಳು
ಎಸ್.ಎಲ್.ಧರ್ಮೇಗೌಡ
ಉಪ ಸಭಾಪತಿಗಳು,
ಕರ್ನಾಟಕ ವಿಧಾನ ಪರಿಷತ್, ಬೆಂಗಳೂರು



# ಎಚ್‌ಡಿಕೆ ಕರ್ಮಭೂಮಿ ರಾಮನಗರ

## ಹರದನಹಳ್ಳಿಯಿಂದ ಬಂದು ಕೃಷಿ, ರಾಜಕೀಯ ಕೃಷಿ ಎರಡರಲ್ಲೂ ಗೆದ್ದರು

ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ 'ರಾಮನಗರ ನನ್ನ ಕರ್ಮ ಭೂಮಿ' ಎಂದು ಹೋದಲ್ಲೆಲ್ಲ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅವರ ಮಾತಿನ ಹಿಂದೆ ನಿಜಕ್ಕೂ ಅರ್ಥವಿದೆ.

ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕಿನ ಹರದನಹಳ್ಳಿಯ ಕುಮಾರಸ್ವಾಮಿ ರಾಮನಗರದ ಮಣ್ಣಿನಲ್ಲಿ ಕೃಷಿ ಹಾಗೂ ರಾಜಕೀಯ ಕೃಷಿ-ಎರಡನ್ನೂ ಫಲ ಬಿಡದೆ ಮಾಡಿ ಸೈ ಎನಿಸಿಕೊಂಡವರು.

ಅದು 1980ರ ದಶಕದ ಆರಂಭದ ದಿನಗಳು. ಆಗಿನ್ನೂ ಕುಮಾರಸ್ವಾಮಿ ಎಂದರೆ ಯಾರು ಎಂದು ರಾಮನಗರದ ಹೆಚ್ಚಿನ ಜನರಿಗೆ ಗೊತ್ತಿರಲಿಲ್ಲ. ಚಲನಚಿತ್ರ ನಿರ್ಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಅವರು ಡಾ.ರಾಜ್‌ಕುಮಾರ್ ಅಭಿನಯದ 'ಬಂಗಾರದ ಮನುಷ್ಯ' ಸಿನಿಮಾವನ್ನು 30ಕ್ಕೂ ಹೆಚ್ಚು ಬಾರಿ ನೋಡಿ ಪ್ರೇರಣೆಗೊಂಡು ಮನಸ್ಸಿನಲ್ಲಿ ಒಕ್ಕಲುತನದ ಕನಸಿನ ಬೀಜ ಬಿತ್ತಿಕೊಂಡರು.

ಕೃಷಿಯ ಬಗ್ಗೆ ಆಸಕ್ತಿ ಹೊಂದಿ ಜಮೀನಿನ ಹುಡುಕಾಟದಲ್ಲಿದ್ದರು. ರಾಮನಗರ ತಾಲೂಕಿನ ಕೇತಿಗಾನಹಳ್ಳಿಯ ಭೂಮಿ ಕಣ್ಮನ ಸೆಳೆಯಿತು. ಸ್ವಂತ ದುಡಿಮೆಯಿಂದ ಸಂಪಾದಿಸಿದ ಹಣ ತಂದು ಜಮೀನು ಕೊಂಡರು. ತಮ್ಮದೇ ಪಡೆ ಕಟ್ಟಿಕೊಂಡು ಹೊಲ ಉತ್ತರು. ಸಸಿ ನೆಟ್ಟರು. ಇಂದು ಅವು ಮುಗಿಲೆತ್ತರಕ್ಕೆ ಬೆಳೆದು ಫಲ ನೀಡುತ್ತಿವೆ. ಆರಂಭದಲ್ಲಿ ಮಹೀಂದ್ರ ಜೀಪ್ ಇಟ್ಟುಕೊಂಡಿದ್ದ ಕುಮಾರಸ್ವಾಮಿ ಹೊಲದಲ್ಲಿ ಬೆಳೆದ ಬಾಳೆ ಗೊನೆಯನ್ನು ಅದಕ್ಕೆ ತುಂಬುತ್ತಿದ್ದುದನ್ನು, ಸ್ವತಃ ತಾವೇ ಟ್ರ್ಯಾಕ್ಟರ್ ಏರಿ ಹೊಲ ಉತ್ತಿದ್ದನ್ನು ಇಲ್ಲಿನ ಹಿರಿಯರು ನೆನಪು ಮಾಡಿಕೊಳ್ಳುತ್ತಾರೆ.

ಸುಮಾರು 48 ಎಕರೆ ವಿಸ್ತೀರ್ಣದಲ್ಲಿನ ತೋಟದಲ್ಲಿ ಕುಮಾರಸ್ವಾಮಿ, 1992-93ರ ವೇಳೆಗೆ ಹೊಸ ಮನೆ ಕಟ್ಟಿಸಿದರು. ಮುಂದೆ ಅಲ್ಲಿಯೇ ಸಾಕಷ್ಟು ದಿನ ಕಳೆದರು. ಈಗಲೂ ರಾಮನಗರಕ್ಕೆ ಬಂದಾಗಲೆಲ್ಲ ಈ ತೋಟದಲ್ಲಿ ಸಮಯ ಕಳೆದು ಹೋಗುತ್ತಾರೆ.

### ರಾಜಕೀಯದ ಏಳು-ಬೀಳು

'ಅಪ್ಪನಂತೆ ನನಗೆ ರಾಜಕೀಯ ಬೇಡ. ಸಿನಿಮಾ, ಕೃಷಿಯ ಒಡನಾಟವೇ ಸಾಕು' ಎನ್ನುತ್ತಿದ್ದ ಕುಮಾರಸ್ವಾಮಿ ರಾಜಕೀಯಕ್ಕೆ ಪದಾರ್ಪಣೆ ಮಾಡಿದ್ದು 1996ರ ಲೋಕಸಭೆ ಚುನಾವಣೆ ಮೂಲಕ. ಆ ಚುನಾವಣೆಯಲ್ಲಿ ಕನಕಪುರ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾದ ಅವರು ತಂದೆ ಎಚ್.ಡಿ. ದೇವೇಗೌಡರ ಜೊತೆ ಸಂಸತ್ತಿನಲ್ಲಿ ಹೆಜ್ಜೆ ಹಾಕಿದರು.

ಆದರೆ, 1998ರಲ್ಲಿ ಕನಕಪುರ ಲೋಕಸಭಾ ಕ್ಷೇತ್ರದಲ್ಲಿನ ಹೀನಾಯ ಸೋಲು ಹಾಗೂ 1999ರಲ್ಲಿ ಸಾತನೂರು ವಿಧಾನಸಭಾ ಕ್ಷೇತ್ರದಲ್ಲಿ ಡಿ.ಕೆ. ಶಿವಕುಮಾರ್ ಎದುರು ಪರಾಭವಗೊಂಡಿದ್ದು ಅವರ ಆತ್ಮಸ್ಥೈರ್ಯವನ್ನು ಕುಗ್ಗಿಸಿತು.

ಆಗ ಕುಮಾರಸ್ವಾಮಿ ಕೇತಿಗಾನಹಳ್ಳಿಯ ತೋಟದ ಮನೆ ಸೇರಿಕೊಂಡರು. ಸಾತನೂರಿನ ಸೋಲು ಕುಮಾರಸ್ವಾಮಿ ಅವರಿಗೆ ರಾಮನಗರ ಕ್ಷೇತ್ರವನ್ನು ಕರ್ಮಭೂಮಿ ಮಾಡಿಕೊಳ್ಳಲು ಸಹಕಾರ ನೀಡಿತು.

ರಾಮನಗರ ಕ್ಷೇತ್ರದಿಂದ ಗೆದ್ದವರು ರಾಜ್ಯದ ಮುಖ್ಯಮಂತ್ರಿ ಹುದ್ದೆ ಏರುತ್ತಾರೆಂಬ ಪ್ರತೀತಿ ಹಿಂದಿನಿಂದಲೂ ಚಾಲ್ತಿಯಲ್ಲಿದೆ. ಈ ಕ್ಷೇತ್ರದ ಮಹತ್ವ ಏನೆಂಬುದು ಅರಿವಿಗೆ ಬರುತ್ತಲೇ ದೇವೇಗೌಡರು 2004ರ ವಿಧಾನಸಭೆ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಿಂದ ಸ್ಪರ್ಧಿಸಲು ಸೂಚಿಸಿದ್ದರು.

ರಾಮನಗರದಿಂದ ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾದ ಕುಮಾರಸ್ವಾಮಿ ರಾಜಕೀಯ ಪುನರ್ ಜನ್ಮ ಪಡೆದುಕೊಂಡರು. ಅದೇ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ರಾಜ್ಯದಲ್ಲಿ ಇತಿಹಾಸವನ್ನೇ ನಿರ್ಮಿಸಿದ್ದರು. 2018ರ ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲಿ ರಾಮನಗರ ಮತ್ತು ಚನ್ನಪಟ್ಟಣ ಕ್ಷೇತ್ರದಿಂದ ಆಯ್ಕೆಯಾಗಿ ಚನ್ನಪಟ್ಟಣ ಕ್ಷೇತ್ರ ಉಳಿಸಿಕೊಂಡು ಮುಖ್ಯಮಂತ್ರಿಯಾದರು. ರಾಮನಗರ ಕ್ಷೇತ್ರವನ್ನು ಪತ್ನಿ ಅನಿತಾ ಅವರಿಗೆ ಧಾರೆ ಎರೆದರು.

### ರಾಮನಗರ ಜಿಲ್ಲೆ ನಿರ್ಮಾತೃ



ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಪ್ರತ್ಯೇಕಗೊಂಡ ರಾಮನಗರ, ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದು 13 ವರ್ಷ ಪೂರೈಸುತ್ತಿದೆ. ಜೆಡಿಎಸ್- ಬಿಜೆಪಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಅಂದಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಇಚ್ಛಾಶಕ್ತಿ ಮತ್ತು ದಿಟ್ಟ ನಿರ್ಧಾರದ ಫಲವಾಗಿ 2007ರ ಆಗಸ್ಟ್ 23ರಂದು ರಾಮನಗರ ಪ್ರತ್ಯೇಕ ಜಿಲ್ಲೆಯಾಗಿ ರೂಪ ತಾಳಿತು. ಮಹತ್ವಾಕಾಂಕ್ಷೆಯಿಂದ ಜಿಲ್ಲೆಗೆ ಜನ್ಮ ನೀಡಿದ್ದ ಕುಮಾರಸ್ವಾಮಿ ಅವರು ತಾವು ಅಧಿಕಾರದಲ್ಲಿದ್ದಾಗ ಜಿಲ್ಲೆಗೆ ಅನೇಕ ಯೋಜನೆಗಳನ್ನು ಘೋಷಿಸಿದರಾದರೂ, ಹೆಚ್ಚು ಕಾಲ ಅಧಿಕಾರದಲ್ಲಿ ಇರದಿರುವುದರಿಂದ ಅವುಗಳನ್ನು ಕಾರ್ಯರೂಪಕ್ಕೆ ತರಲಾಗದೆ ಸೋತರು.



## ಹಾಸನ ಟು ಬೆಂಗಳೂರು

### ಕುಮಾರಸ್ವಾಮಿ ಹುಟ್ಟಿದ್ದು ಹಾಸನ, ಬೆಳೆದಿದ್ದು ರಾಜಧಾನಿಯಲ್ಲಿ

ಹಾಸನ ಈ ದೇಶಕ್ಕೆ ಒಬ್ಬರು ಪ್ರಧಾನಿಯನ್ನು, ರಾಜ್ಯಕ್ಕೆ ಇಬ್ಬರು ಮುಖ್ಯಮಂತ್ರಿಗಳನ್ನು ಕೊಟ್ಟ ಜಿಲ್ಲೆ. ಇಬ್ಬರ ಪೈಕಿ 'ಕುಮಾರಣ್ಣ' ಎಂದು ಹೆಸರುವಾಸಿಯಾಗಿರುವ ಎಚ್.ಡಿ. ಕುಮಾರಸ್ವಾಮಿ ಅವರು ತಮ್ಮ ಬಾಲ್ಯವನ್ನು ಕಳೆದಿದ್ದು ತಮ್ಮ ಹುಟ್ಟೂರಾದ ಹರದನಹಳ್ಳಿಯಲ್ಲೇ. ತಮ್ಮ ಪ್ರೌಢಾವಸ್ಥೆಯಲ್ಲೇ ಕುಮಾರಸ್ವಾಮಿ ಬೆಂಗಳೂರು ಸೇರಿಕೊಂಡರಾದರೂ ಜನ್ಮಭೂಮಿ ಬಗ್ಗೆ ಅಪಾರ ಗೌರವ ಹೊಂದಿದ್ದಾರೆ.

ಹೊಳೆನರಸೀಪುರ ತಾಲೂಕು ಹಳೆಕೋಟೆ ಹೋಬಳಿಯ ಹರದನಹಳ್ಳಿಯಲ್ಲಿ ಹುಟ್ಟಿದ ಕುಮಾರಸ್ವಾಮಿ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ್ದು ಹೊಳೆನರಸೀಪುರ ಪಟ್ಟಣದಲ್ಲಿದ್ದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ. ಬಾಲ್ಯದಿಂದಲೂ ಅವರದ್ದು ಸೌಮ್ಯ ಸ್ವಭಾವ. ಅವರ ಅಣ್ಣ ಎಚ್.ಡಿ. ರೇವಣ್ಣ ಕೂಡ ಅದೇ ಶಾಲೆಯ ವಿದ್ಯಾರ್ಥಿ. ಆದರೆ ಇವರಿಬ್ಬರ ನಡುವೆ ಭಾರೀ ವ್ಯತ್ಯಾಸವಿತ್ತು. ಹೇಳಿದ್ದನ್ನು ಓದಿ ಬರೆಯುವ ಸೌಮ್ಯ ಸ್ವಭಾವ ಕುಮಾರಸ್ವಾಮಿಯವರದ್ದಾದರೆ, ಓದಿನಲ್ಲಿ ಹಿಂದುಳಿದು ನಾಯಕತ್ವದಲ್ಲಿ ಮುಂದಿರುವ ಗುಣ ರೇವಣ್ಣ ಅವರದ್ದು ಎಂದು ಅವರಿಗೆ ಅಕ್ಷರ ಕಲಿಸಿದ ಶಿಕ್ಷಕರು ಹೇಳುತ್ತಾರೆ. ಪ್ರಾಥಮಿಕ ಶಿಕ್ಷಣವನ್ನು ಹೊಳೆನರಸೀಪುರದಲ್ಲಿ ಮುಗಿಸಿದ ನಂತರ ಪ್ರೌಢ ಶಿಕ್ಷಣಕ್ಕಾಗಿ ಸೇರಿದ್ದು ಹಾಸನ ನಗರದ ಸಾಲಗಾಮೆ ರಸ್ತೆಯ ಸರಸ್ವತಿ ದೇವಸ್ಥಾನದ ವೃತ್ತದಲ್ಲಿದ್ದ ಸಂತ ಜೋಸೆಫರ ಶಾಲೆಯನ್ನು. ಅಲ್ಲಿ ಎಂಟು ಮತ್ತು ಒಂಭತ್ತನೇ ತರಗತಿಯನ್ನು ಕುಮಾರಸ್ವಾಮಿ ಮುಗಿಸಿದರು. ಈ ಸಂದರ್ಭದಲ್ಲೂ ಕಡಿಮೆ ಮಾತು, ನಾಚಿಕೆ ಸ್ವಭಾವವೆ. ಹಾಗಾಗಿ ಸ್ನೇಹಿತರೂ ಕಡಿಮೆ. ಇದ್ದ ಕೆಲವೇ ಸ್ನೇಹಿತರ ಪೈಕಿ ನಗರಸಭೆ ಅಧ್ಯಕ್ಷರು ಹಾಗೂ ಹಲವು ಬಾರಿ ಸದಸ್ಯರೂ ಆಗಿದ್ದ ಕೆ.ಟಿ. ಪ್ರಕಾಶ್ ದಾಸಪ್ಪ ಅವರು ಕುಮಾರಸ್ವಾಮಿ ಅವರ ಆತ್ಮೀಯರಾಗಿದ್ದರು. 9ನೇ ತರಗತಿ ನಂತರ ಕುಮಾರಸ್ವಾಮಿ ಅವರು ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ತೆರಳಿದವರು ಅಲ್ಲಿಯೇ ನೆಲೆಸಿದರು.

**ಹುಟ್ಟೂರಿನ ಬಗ್ಗೆ ಭಾರೀ ಪ್ರೀತಿ:** ಬೆಂಗಳೂರಿನಲ್ಲಿಯೇ ನೆಲೆಸಿದ ಕುಮಾರಸ್ವಾಮಿ ನಂತರದಲ್ಲಿ ಕಂಡುಕೊಂಡ ದಾರಿ ಸಿನಿಮಾರಂಗ. ನಿರ್ಮಾಪಕರಾಗಿ ಸಾಕಷ್ಟು ಸಿನಿಮಾಗಳನ್ನು ನಿರ್ಮಿಸಿದರು. ಇದರ ಜತೆಜತೆಗೇ ರಾಜಕೀಯವಾಗಿಯೂ ಬೆಳೆದ ಅವರಿಗೆ ಹುಟ್ಟೂರನ್ನು ಮಾತ್ರ ಮರೆಯಲು ಆಗಲಿಲ್ಲ. ತನಗೆ ಜನ್ಮ ನೀಡಿದ ತನ್ನೂರಿನ ಋಣ ತೀರಿಸಲು ಅವಕಾಶಕ್ಕೆ ಕಾಯುತ್ತಿದ್ದರು. ಹಾಗಾಗಿಯೇ ಎರಡು ಬಾರಿ ಮುಖ್ಯಮಂತ್ರಿಯಾದಾಗಲೂ ಜಿಲ್ಲೆಗೆ ಹೆಚ್ಚು ಬಾರಿ ಭೇಟಿ ನೀಡಿದರು. ಜಿಲ್ಲೆಯ ಅಭಿವೃದ್ಧಿಗಾಗಿ ಹೆಚ್ಚು ಗಮನ ನೀಡಿದರು. ಆ ಸಂದರ್ಭದಲ್ಲಿಯೇ ಜಿಲ್ಲೆಗೆ ಸರ್ಕಾರಿ ಮೆಡಿಕಲ್ ಕಾಲೇಜು, ಎಂಜಿನಿಯರಿಂಗ್, ನರ್ಸಿಂಗ್, ವೆಟರಿನರಿ, ಡಿಪ್ಲೊಮಾ, ಐಟಿಐ ಕಾಲೇಜುಗಳು ಸೇರಿದಂತೆ ಹಲವು ಡಿಗ್ರಿ, ಪಿಯು ಹಾಗೂ ಪಬ್ಲಿಕ್ ಶಾಲೆಗಳು ಮಂಜೂರಾದವು. ಜಿಲ್ಲೆ ಶೈಕ್ಷಣಿಕವಾಗಿ ಅಭಿವೃದ್ಧಿಯಾಗಬೇಕೆನ್ನುವ ಉದ್ದೇಶದಿಂದ ಇಷ್ಟೆಲ್ಲವನ್ನೂ ಧಾರೆ ಎರೆದರು. ಇದರ ಫಲವಾಗಿಯೇ ಇಂದು ಜಿಲ್ಲೆ ಶೈಕ್ಷಣಿಕವಾಗಿ ಪ್ರಗತಿ ಕಾಣುತ್ತಿದೆ.

ಶೈಕ್ಷಣಿಕವಷ್ಟೇ ಅಲ್ಲ, ರಸ್ತೆ ಹಾಗೂ ನೀರಾವರಿ ಅಭಿವೃದ್ಧಿಗೂ ಕೋಟಿಗಟ್ಟಲೆ ಅನುದಾನ ನೀಡಿದರು. ಬೆಂಗಳೂರು-ಮಂಗಳೂರು ರಸ್ತೆ ನಾಲ್ಕು ಪಥದ ರಸ್ತೆಯಾಗಿದ್ದು ಕುಮಾರಸ್ವಾಮಿ ಅವಧಿಯಲ್ಲಿ. ಜಿಲ್ಲೆಯಲ್ಲಿ ನೆನೆಗುದಿಗೆ ಬಿದ್ದಿದ್ದ ಎಷ್ಟೋ ಏತ ನೀರಾವರಿ ಯೋಜನೆಗಳು ಜೀವ ಪಡೆದವು. ಅದರ ಫಲವಾಗಿ ಇಂದು ಚನ್ನರಾಯಪಟ್ಟಣ ತಾಲೂಕಿನ ಸಾಕಷ್ಟು ಕೆರೆಗಳು ಹೇಮಾವತಿ ನೀರಿನಿಂದ ಭರ್ತಿಯಾಗಿವೆ.

> ಬೆಂಗಳೂರು-ಮಂಗಳೂರು ರಸ್ತೆ ನಾಲ್ಕು ಪಥದ ರಸ್ತೆಯಾಗಿದ್ದು ಕುಮಾರ ಸ್ವಾಮಿ ಅವಧಿಯಲ್ಲಿ. ಜಿಲ್ಲೆಯಲ್ಲಿ ನೆನೆಗುದಿಗೆ ಬಿದ್ದಿದ್ದ ಎಷ್ಟೋ ಏತ ನೀರಾವರಿ ಯೋಜನೆಗಳು ಜೀವ ಪಡೆದವು.

## ಎಚ್‌ಡಿಕೆಗೆ ಆಸರೆಯಾಗಿ ನಿಲ್ಲುವ ಮಂಡ್ಯ

### 7ಕ್ಕೆ ಏಳೂ ಕ್ಷೇತ್ರಗಳಲ್ಲಿ ಜೆಡಿಎಸ್ ಗೆಲ್ಲಿಸಿ ಪಕ್ಷಕ್ಕೆ ಗಟ್ಟಿ ನೆಲೆ ಒದಗಿಸಿದ ಜಿಲ್ಲೆ | ಬಜೆಟ್‌ನಲ್ಲೂ ಮಂಡ್ಯ ಜಿಲ್ಲೆಗೆ ಒತ್ತು

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಕುಟುಂಬದೊಂದಿಗೆ ಉತ್ತಮ ಒಡನಾಟ ಹೊಂದಿರುವ ಮಂಡ್ಯ ಜಿಲ್ಲೆ ಅನೇಕ ಸಂದರ್ಭದಲ್ಲಿ ಜನತಾಪರಿವಾರದ ಬೆಳವಣಿಗೆಗೆ ಸಹಕಾರಿಯಾಗಿದೆಯಲ್ಲದೆ, ಪಕ್ಷ ಕಷ್ಟದಲ್ಲಿರುವಾಗ ಕೈ ಹಿಡಿದಿದೆ.

ಕೃಷಿ, ನೀರಾವರಿ ಸೇರಿದಂತೆ ರೈತರ ಪರವಾದ ಹೋರಾಟದಲ್ಲಿ ನಿರತವಾಗಿರುವ ಜನತಾದಳಕ್ಕೆ ಹಿಂದಿನಿಂದಲೂ ಬೆಂಬಲ ನೀಡುತ್ತಾ ಬಂದಿರುವ ಜಿಲ್ಲೆಯ ಬಹುಪಾಲು ಮತದಾರರು ದೇವೇಗೌಡರ ಕುಟುಂಬದ ಉತ್ತರಾಧಿಕಾರಿಯಾದ ಎಚ್.ಡಿ. ಕುಮಾರಸ್ವಾಮಿ ಅವರನ್ನು ಬೆಂಬಲಿಸುತ್ತಾ ಬಂದಿರುವುದಕ್ಕೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಎಲ್ಲ 7 ವಿಧಾನಸಭಾ ಕ್ಷೇತ್ರಗಳ ಭರ್ಜರಿ ಗೆಲುವು ಸಾಕ್ಷಿಯಾಗಿದೆ.

ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಬಗ್ಗೆ ವಿಶೇಷ ಪ್ರೀತಿಯನ್ನು ಜಿಲ್ಲೆಯ ಜೆಡಿಎಸ್ ಕಾರ್ಯಕರ್ತರು ಮತ್ತು ಮುಖಂಡರು ಹೊಂದಿದ್ದಾರೆ. ರಾಮನಗರ ಜಿಲ್ಲೆ ಕುಮಾರಸ್ವಾಮಿ ಅವರಿಗೆ ರಾಜಕೀಯ ಪುಣ್ಯಭೂಮಿಯಾದರೂ ಮಂಡ್ಯ ಜಿಲ್ಲೆ ಅವರಿಗೆ ಆಸರೆಯಾಗಿದೆಯಲ್ಲದೆ, ಅವರ ಬೆಳವಣಿಗೆಗೂ ಪೂರಕವಾಗಿಯೇ ನಡೆದುಕೊಂಡು ಬಂದಿದೆ.



ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಪ್ರಬಲ ಅಸ್ತಿತ್ವದ ನಡುವೆಯೂ ಜನತಾದಳದ ಬೆಳವಣಿಗೆಗೆ ಪೂರಕ ವಾತಾವರಣ ಸೃಷ್ಟಿಸುವಲ್ಲಿ ಯಶಸ್ವಿಯಾಗಿದ್ದು ಕುಮಾರಸ್ವಾಮಿ ಅವರ ನಾಯಕತ್ವಕ್ಕೆ ಇಲ್ಲಿನ ಮತದಾರರು ನೀಡಿರುವ ಅಭಿಮಾನವೇ ಆಗಿದೆ. ಎಚ್.ಡಿ. ಕುಮಾರಸ್ವಾಮಿ 2006ರಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆ ಜಿಲ್ಲೆಯ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. 2018ರಲ್ಲಿ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿದ್ದಾಗಲೂ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ 9 ಸಾವಿರ ಕೋಟಿ ರು. ಅನುದಾನ ಘೋಷಿಸಿದ್ದು ಜಿಲ್ಲೆಯ ಬಗ್ಗೆ ಅವರಿಗಿದ್ದ ಕಾಳಜಿಯನ್ನು ವ್ಯಕ್ತಪಡಿಸುತ್ತದೆ.

ಅಂದಿನ ವಿರೋಧಪಕ್ಷದಲ್ಲಿದ್ದ ಬಿಜೆಪಿಯು ಕುಮಾರಸ್ವಾಮಿ ಅವರು ಮೈತ್ರಿ ಸರ್ಕಾರದಲ್ಲಿ ಮಂಡಿಸಿದ ಬಜೆಟ್ ಅನ್ನು ಮಂಡ್ಯ ಬಜೆಟ್ ಎಂದು ಟೀಕಿಸಿದರೂ ಅದನ್ನು ಲೆಕ್ಕಿಸದೆ ಜೆಡಿಎಸ್‌ನ ಪ್ರಭಾವಿ ನಾಯಕರಾದ ಡಿ.ಸಿ.ತಮ್ಮಣ್ಣ, ಸಿ.ಎಸ್.ಪುಟ್ಟರಾಜು ಅವರಿಗೆ ಮಂತ್ರಿ ಸ್ಥಾನ ನೀಡುವುದರಮೂಲಕಜಿಲ್ಲೆಗೆತಮ್ಮರಾಜಕೀಯ ನಿಷ್ಠೆಯನ್ನು ಪ್ರದರ್ಶಿಸಿದರು.

ಹಾಸನ ಜಿಲ್ಲೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ ಮಾಜಿ ಸಚಿವ ಎಚ್.ಡಿ. ರೇವಣ್ಣರಿಗೆ ರಾಜಕೀಯ ಜನ್ಮಭೂಮಿಯಾದರೆ ಕುಮಾರಸ್ವಾಮಿ ಅವರಿಗೆ ರಾಮನಗರ ಆದ್ಯತೆ ಕ್ಷೇತ್ರವಾಗಿತ್ತು. ಈ ಎರಡೂ ಕ್ಷೇತ್ರಗಳಿಗಿಂತ ಸುರಕ್ಷಿತವಾದ ಮಂಡ್ಯ ಜಿಲ್ಲೆಯಿಂದಲೇ ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿ ಅವರ ರಾಜಕೀಯ ಅಧ್ಯಾಯ ಆರಂಭಿಸುವ ಮಹತ್ವಾಕಾಂಕ್ಷೆಯನ್ನು ಅವರು ಹೊಂದಿದ್ದರು.

ಸರ್ಕಾರ ಅಸ್ತಿತ್ವದಲ್ಲಿದ್ದ ವೇಳೆ ಕಾಂಗ್ರೆಸ್-ಜೆಡಿಎಸ್ ನಾಯಕರನ್ನು ಒಗ್ಗೂಡಿಸಿ ತಮ್ಮ ಪುತ್ರನ ಗೆಲುವಿಗೆ ಅವಿರತ ಹೋರಾಟವನ್ನು ನಡೆಸಿದ್ದರು. ಈ ಹಂತದಲ್ಲಿ ಮಳವಳ್ಳಿ ಶಾಸಕ ಅನ್ನದಾನಿ ಅವರಿಗೆ ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮ, ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾಖಾನ್ ಅವರಿಗೆ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವನ್ನು ನೀಡುವುದರಜೊತೆಗೆಇತರೆಕಾರ್ಯಕರ್ತರಿಗೂ ವಿವಿಧ ಅವಕಾಶಗಳನ್ನು ಕಲ್ಪಿಸುವ ಮೂಲಕ ಜಿಲ್ಲೆಗೆ ಅಧಿಕಾರದ ಸುಗ್ಗಿಯನ್ನೇ ನೀಡಿದ್ದರು.

ರೈತರ ಆರ್ಥಿಕ ಜೀವನಾಡಿಯಾದ ಮೈಷುಗರ್ ಪುನಶ್ಚೇತನಕ್ಕೆ ಬದಲಾಗಿ ಆಧುನಿಕ ತಂತ್ರಜ್ಞಾನದೊಡನೆ ಹೊಸ ಕಾರ್ಖಾನೆಯನ್ನೇ ನಿರ್ಮಿಸುವ ಮಹತ್ವಾಕಾಂಕ್ಷೆಯನ್ನು ಎಚ್.ಡಿ. ಕುಮಾರಸ್ವಾಮಿ ಹೊಂದಿದ್ದರು. ಅದಕ್ಕಾಗಿ ಬಜೆಟ್‌ನಲ್ಲಿ 400 ಕೋಟಿ ರು. ಮೀಸಲಿಟ್ಟಿದ್ದರು. ಡಿಸ್ಟಿಲರಿ ಘಟಕ, ಎಥೆನಾಲ್ ಘಟಕ ಸ್ಥಾಪನೆಯ ಯೋಜನೆ ರೂಪಿಸಿ ಅದಕ್ಕೆ 100 ಕೋಟಿ ರು. ಹಣವನ್ನು ತೆಗೆದಿರಿಸಿದ್ದರು.